ಸಂಪುಟ : ೯ ಸಂಚಿಕೆ ೨೫ ಪುಟ : 4 ಬೆಲೆ : ೩.೦೦ ಶುಕ್ರವಾರ ಫೆಬ್ರವರಿ 23, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 25 Pages : 4 Price : 3.00 Friday February 23, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದು ನೀರು ಪೂರೈಕೆಯಲ್ಲಿ ವ್ಯತ್ಯಯ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆಯ ಸಗಟು ನೀರು ಸರಬರಾಜು ಮಾಡುವ ಹಮ್ಮಿಗಿ ಜಾಕವೆಲ್‌ನಿಂದ ಬರದೂರ ಗ್ರಾಮದವರೆಗೂ ಹಾಗೂ ಚಿಕ್ಕಟ್ಟಿ ಶಾಲೆ ಎದುರಿನ ಎನ್‌ಎಚ್‌ಎಐ ಹೆದ್ದಾರಿಯ ಪಕ್ಕದಲ್ಲಿ ಹಲವು ಭಾಗಗಳ ನೀರು ಪೂರೈಕೆಯ ಮುಖ್ಯ ಕೊಳವೆ ಮಾರ್ಗಗಳಲ್ಲಿ ದುರಸ್ತಿ ಇರುವುದರಿಂದ ಫೆ.23ರಂದು ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ದುರಸ್ತಿ ನಂತರದಲ್ಲಿ ನೀರು ಪೂರೈಕೆ ಯಥಾವತ್ತಾಗಿ ಮಾಡಲಾಗುವುದು. ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

■ ವಿಜಯಸಾಕ್ಷಿ ಸುದ್ದಿ, ಗದಗ

110 ಕೆವ್ಹಿ ಬೆಟಗೇರಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಪರಿವರ್ತಕ-1ರ ತೈಲ ಸೋರುವಿಕೆ ತಡೆಯುವ ಕೆಲಸ ಕೈಗೊಳ್ಳುವುದರಿಂದ ಫೆ. 25ರ ಮುಂಜಾನೆ 10 ಗಂಟೆಯಿಂದ ಸಾಯಂಕಾಲ 5.30 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

110 ಕೆವ್ಹಿ ಬೆಟಗೇರಿ ಉಪಕೇಂದ್ರದಿಂದ ಪೂರೈಕೆಯಾಗುವ ಎಲ್ಲಾ ನಗರ, ಕೈಗಾರಿಕಾ, ನಿರಂತರಜ್ಯೋತಿ, ಇ.ಐ.ಪಿ, ಸೋಲಾರ್ ಐ.ಪಿ.ಪಿ ಮತ್ತು ಗ್ರಾಮೀಣ ಪ್ರದೇಶಗಳ ಎಲ್ಲಾ 11 ಕೆವ್ಹಿ ವಿತರಣಾ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಕಾರಣ ಸಾರ್ವಜನಿಕರು ಸದರಿ ಪ್ರಕಟಣೆಯನ್ನು ಗಮನಿಸಿ ಕಂಪನಿಯೊಂದಿಗೆ ಸಹಕರಿಸಬೇಕೆಂದು ಪ್ರಕಟಣೆಯಲ್ಲಿ ವಿನಂತಿಸಲಾಗಿದೆ.

**ಭೂ ರಹಿತ ಕೃಷಿ ಕಾರ್ಮಿಕ, ರೈತರ ಮಕ್ಕಳಿಗಾಗಿ ಮುಂದುವರಿದ ಯೋಜನೆ**

## ಮುಖ್ಯಮಂತ್ರಿ ರೈತ ವಿದ್ಯಾನಿಧಿ

■ ವಿಜಯಸಾಕ್ಷಿ ಸುದ್ದಿ, ಗದಗ

ರೈತರ ಮಕ್ಕಳ ಸ್ನಾತಕೋತ್ತರ ಶಿಕ್ಷಣದವರೆಗೆ ವಿಧ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ರಾಜ್ಯ ಸರ್ಕಾರ 2023-24ನೇ ಸಾಲಿನಲ್ಲಿ 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ಕಾರ್ಯಕ್ರಮ ಹಾಗೂ ಭೂರಹಿತ ಕೃಷಿ ಕಾರ್ಮಿಕರ ವಿದ್ಯಾನಿಧಿ ಕಾರ್ಯಕ್ರಮವನ್ನು ಮುಂದುವರೆಸಿದೆ.

ಈ ಯೋಜನೆಯಡಿ ಎಸ್‌ಎಸ್‌ಎಲ್‌ಸಿ/10ನೇ ತರಗತಿಯನ್ನು ಪೂರೈಸಿರುವ ಹಾಗೂ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿರುವ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆ/ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ರೈತರ ಮಕ್ಕಳು ಹಾಗೂ ಭೂರಹಿತ ಕೃಷಿ ಕಾರ್ಮಿಕರ ಮಕ್ಕಳು ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುತ್ತಾರೆ. ವಿದ್ಯಾರ್ಥಿ ವೇತನವನ್ನು ವಾರ್ಷಿಕವಾಗಿ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಪದ್ಧತಿಯ ಮೂಲಕ ವರ್ಗಾಯಿಸಲಾಗುವುದು.

2023-24ನೇ ಸಾಲಿನಲ್ಲಿ ಇತರೆ ಇಲಾಖೆಗಳ(ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಇತರೆ ಇಲಾಖೆಗಳು) ಯೋಜನೆಯಡಿ ವಿದ್ಯಾರ್ಥಿವೇತನ ಪಡೆಯುತ್ತಿರುವ ವಿದ್ಯಾರ್ಥಿಗಳು ಮುಖ್ಯಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮ ಹಾಗೂ ಭೂರಹಿತ ಕೃಷಿ ಕಾರ್ಮಿಕರ ವಿದ್ಯಾನಿಧಿ ಕಾರ್ಯಕ್ರಮದಡಿ ವಿದ್ಯಾರ್ಥಿವೇತನ ಪಡೆಯಲು ಅರ್ಹರಾಗುವುದಿಲ್ಲ.

2023-24ನೇ ಸಾಲಿನಲ್ಲಿ ಮುಖ್ಯಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮ ಹಾಗೂ ಭೂರಹಿತ ಕೃಷಿ ಕಾರ್ಮಿಕರ ವಿದ್ಯಾನಿಧಿ ಕಾರ್ಯಕ್ರಮದಡಿ ವಿದ್ಯಾರ್ಥಿ ವೇತನ ಪಡೆಯಲು ಸಾಮಾನ್ಯ ವರ್ಗದ ವಿದ್ಯಾರ್ಥಿಗಳ ಪೋಷಕರ ಆದಾಯವು ರೂ. 2.50 ಲಕ್ಷ ಮೀರಿರಬಾರದು ಎಂಬ ಷರತ್ತನ್ನು ವಿಧಿಸಿರುವುದರಿಂದ ಸಾಮಾನ್ಯ ವರ್ಗದಡಿ ಬರುವ ರೈತರ ಮಕ್ಕಳು ತಮ್ಮ ಪೋಷಕರ ಆದಾಯ ಪ್ರಮಾಣಪತ್ರವನ್ನು ಸಲ್ಲಿಸಲು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ವಿದ್ಯಾರ್ಥಿಗಳ ಲಾಗಿನ್‌ನಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಫೆಬ್ರುವರಿ 29ರೊಳಗೆ ಪ್ರಮಾಣಪತ್ರವನ್ನು ಅಪ್‌ಲೋಡ್ ಮಾಡಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಜಿ.ಎಚ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಮೀಪದ ಡಿಡಿಪಿಐ, ಡಿಡಿಪಿಯು, ತಮ್ಮ ಕಾಲೇಜಿನ ಪ್ರಾಂಶುಪಾಲರು, ಸಮೀಪದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದು ಎಂದು ತಿಳಿಸಿದ್ದಾರೆ. ಎಲ್ಲಾ ಅರ್ಹ ರೈತರ ಮಕ್ಕಳು ಹಾಗೂ ಭೂರಹಿತ ಕೃಷಿ ಕಾರ್ಮಿಕರ ಮಕ್ಕಳು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ (https://ssp.postmatric.karnataka.gov.in) ನೋಂದಾಯಿಸಿಕೊಳ್ಳಬಹುದಾಗಿದೆ.

## 'ಸಂವಿಧಾನ ಜಾಗೃತಿ ಜಾಥಾ' ನೇರ ಪ್ರಸಾರ

■ ವಿಜಯಸಾಕ್ಷಿ ಸುದ್ದಿ, ಗದಗ

ಬೆಂಗಳೂರು ಅರಮನೆ ಮೈದಾನದಲ್ಲಿ ಫೆ.24 ಮತ್ತು 25ರಂದು ನಡೆಯುವ ಸಂವಿಧಾನ ಜಾಗೃತಿ ಜಾಥಾ ನಿಮಿತ್ತ ನಡೆಯುವ ಕಾರ್ಯಕ್ರಮಗಳನ್ನು ದೊಡ್ಡ ಪರದೆಯ ಮೇಲೆ ನೇರ ಪ್ರಸಾರವನ್ನು ವೀಕ್ಷಿಸಲು ಸಾರ್ವಜನಿಕರಿಗೆ ಮತ್ತು ಎಲ್ಲ ಸಮುದಾಯದ ಮುಖಂಡರುಗಳಿಗೆ ಅನುಕೂಲವಾಗುವಂತೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಲು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಪ್ರಶಾಂತ ಎಂ.ವರಗಪ್ಪನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೃಹತ್ ಉದ್ಯೋಗ ಮೇಳ

■ ವಿಜಯಸಾಕ್ಷಿ ಸುದ್ದಿ, ಗದಗ

ಬೆಂಗಳೂರಿನ ಅರಮನೆ ಮೈದಾನದಲ್ಲಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಫೆ.26 ಮತ್ತು 27ರಂದು ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದ್ದು, ಮೇಳದಲ್ಲಿ 500ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿ/ಉದ್ದಿಮೆ/ಉದ್ಯೋಗದಾತ ಸಂಸ್ಥೆಗಳು ಭಾಗವಹಿಸುತ್ತಿವೆ. https://udyoga.skillconnet.kaushalkar.com ಈ ಲಿಂಕ್‌ನಲ್ಲಿ ನೊಂದಾಯಿಸುವಂತೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಬೇಸಿಗೆ ಆರಂಭಕ್ಕೂ ಮುನ್ನವೇ ಅವಳಿ ನಗರಕ್ಕೆ ತಟ್ಟಿದ ನೀರಿನ ಅಭಾವ | ಹನಿ ನೀರಿಗೂ ತತ್ವಾರ**

# ಆರಂಭದಲ್ಲೇ ಹೀಗೆ, ಮುಂದೆ ಹೇಗೆ?

■ ವಿಜಯಸಾಕ್ಷಿ ಸುದ್ದಿ, ಗದಗ

ಈ ಸಲದ ಮಳೆಗಾಲದಲ್ಲಿ ನಿರೀಕ್ಷೆಯಂತೆ ಮಳೆಯಾಗಿಲ್ಲ. ಒಂದೆಡೆ ರೈತರು ಬರದ ಬಿಸಿಯಲ್ಲಿ ಈಗಾಗಲೇ ಸಾಕಷ್ಟು ನಷ್ಟ ಅನುಭವಿಸಿದ್ದಾರೆ. ಇನ್ನೊಂದೆಡೆ, ನಿರೀಕ್ಷೆಯಂತೆ ಬೇಸಿಗೆಯಲ್ಲಿ ತಲೆದೋರಬಹುದಾದ ನೀರಿನ ಅಭಾವದ ಆತಂಕ ಇನ್ನಷ್ಟು ನಿಚ್ಚಳವಾಗಿದೆ. ಇದಿನ್ನೂ ಬೇಸಿಗೆ ಪ್ರಾರಂಭವಾಗುವ ಮುನ್ನವೇ ಹಲವೆಡೆ ಜೀವಜಲಕ್ಕಾಗಿ ಹಾಹಾಕಾರ ಪ್ರಾರಂಭವಾಗಿದೆ.

ಈ ಪರಿಸ್ಥಿತಿಗೆ ಗದಗ ಜಿಲ್ಲೆಯೂ ಹೊರತಾಗಿಲ್ಲ. ಬೇಸಿಗೆ ಆರಂಭಕ್ಕೂ ಮುನ್ನವೇ ಅವಳಿ ನಗರದ ಜನರು ನೀರಿಗಾಗಿ ಪರಿತಪಿಸುವ ಸ್ಥಿತಿ ನಿರ್ಮಾಣವಾಗುತ್ತಿದೆ. ಅವಳಿ ನಗರದ ಬಹುತೇಕ ಬಡಾವಣೆಗಳಲ್ಲಿ ತಿಂಗಳಿಂದಲೇ ಕುಡಿಯುವ ನೀರಿನ ಅಭಾವ ತಲೆದೋರತೊಡಗಿದೆ. ನೀರು ಸರಬರಾಜಿನಲ್ಲಿ ವ್ಯತ್ಯಯವಾದ ಸಂದರ್ಭಗಳಲ್ಲಿ ಸಾರ್ವಜನಿಕರು ನಗರಸಭೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರೂ, ನಗರಾಡಳಿತ ಕೈಕಟ್ಟಿ ಕೂರುವಂತಾಗಿದೆ. ನಗರಸಭೆ ಕಿವಿ ಹಿಂಡಬೇಕಾದ ಜಿಲ್ಲಾಡಳಿತ ಕೂಡ ಮೌನಕ್ಕೆ ಶರಣಾಗಿರುವುದು ಸಾರ್ವಜನಿಕರಲ್ಲಿ ಇನ್ನಷ್ಟು ಅಸಹನೆ ಸೃಷ್ಟಿಸುತ್ತಿದೆ.

ಸದ್ಯಕ್ಕೆ ನೀರಿಲ್ಲದೇ ಸುಮ್ಮನಾಗಿರುವ ನಲ್ಲಿಗಳು ಎಲ್ಲೆಡೆ ಕಂಡುಬರುತ್ತಿವೆ. ಖಾಲಿ ಕೊಡಗಳನ್ನು ಹಿಡಿದು ಸರತಿ ಸಾಲಿನಲ್ಲಿ ನಿಲ್ಲುತ್ತಿರುವ ಸಾರ್ವಜನಿಕರು ಶಾಪ ಹಾಕುತ್ತಿದ್ದಾರೆ. ಅವಳಿ ನಗರಕ್ಕೆ ತುಂಗಭದ್ರಾ ನದಿಯಿಂದ ನೀರು ಪೂರೈಕೆ ಆಗುತ್ತಿದ್ದರೂ, ನದಿಯಲ್ಲಿ ಇನ್ನೂ ಸಾಕಷ್ಟು ನೀರಿನ ಸಂಗ್ರಹವಿದ್ದರೂ ಅವಳಿ ನಗರದ ಸಾರ್ವಜನಿಕರಿಗೆ ಮಾತ್ರ ಲಭ್ಯವಾಗುತ್ತಿಲ್ಲ. ಇದಕ್ಕೆ ನಗರಸಭೆ ಆಡಳಿತದ ಬೇಜವಾಬ್ದಾರಿಯೇ ಕಾರಣ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಎತ್ತು ಏರಿಗೆ, ಕೋಣ ನೀರಿಗೆ ಎಂಬಂತೆ ಅಧಿಕಾರಿಗಳು ಒಂದು ಕಡೆ ಮುಖ ಮಾಡಿದ್ದರೆ, ಜನಪ್ರತಿಧಿಗಳು ಇನ್ನೆಲ್ಲೋ ನೋಡುತ್ತಿದ್ದಾರೆ. ಒಟ್ಟಿನಲ್ಲಿ ಅಧಿಕಾರಿಗಳು-ಜನಪ್ರತಿನಿಧಿಗಳ ನಡುವೆ ಹೊಂದಾಣಿಕೆಯಿಲ್ಲದಿರುವುದು ಸಾರ್ವಜನಿಕರಿಗೆ ಮಾತ್ರ ಸಂಕಷ್ಟ ತಂದೊಡ್ಡಿದೆ.



ಬೆಟಗೇರಿಯ ಏಳನೇ ವಾರ್ಡ್‌ನ ಶಿವಾಜಿ ನಗರದಲ್ಲಿ ಗುರುವಾರ ಕಂಡು ಬಂದ ದೃಶ್ಯ

ಈ ನಡುವೆ, ಎಲ್ಲೆಂದರಲ್ಲಿ ನೀರು ಸರಬರಾಜಿನ ಪೈಪುಗಳು ಒಡೆದು ಅಪಾರ ಪ್ರಮಾಣದ ನೀರು ಪೋಲಾಗುತ್ತಿದೆ. ಅಧಿಕಾರಿಗಳು ಮಾತ್ರ ಇದು ತಮಗೆ ಸಂಬಂಧಿಸಿದ್ದಲ್ಲ, ಮೇಲಧಿಕಾರಿಗಳಿಂದ ಆದೇಶ ಬಂದರೆ ನೋಡೋಣ ಎಂಬಂತೆ ಸುಮ್ಮನಿದ್ದಾರೆಯೇ ಹೊರತು ರಿಪೇರಿ ಮಾಡುವ ಗೋಜಿಗೆ ಹೋಗುತ್ತಿಲ್ಲ. ನಗರಸಭೆ ಸದಸ್ಯರಂತೂ ತಮ್ಮನ್ನು ಆಯ್ಕೆ ಮಾಡಿ ಕಳಿಸಿದ ಸಾರ್ವಜನಿಕರಿಗೆ ಮುಖ ತೋರಿಸಲೂ ಅಂಜುವಂತಾಗಿದೆ. ಗಂಡ-ಹೆಂಡಿರ ಜಗಳದಲ್ಲಿ ಕೂಸು ಬಡವಾಯ್ತು ಅನ್ನೋ ಹಾಗೇ ತಾಳ ಮೇಳವಿಲ್ಲದ ಅಧಿಕಾರಿಗಳು, ಜನಪ್ರತಿನಿಧಿಗಳ ನಡುವೆ ಅವಳಿ ನಗರದ ಜನರು ಹನಿ ನೀರಿಗೂ ಪರಿತಪಿಸುವಂತಾಗಿದೆ.

ಗದಗ-ಬೆಟಗೇರಿ ಅವಳಿ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ತಾರಕಕ್ಕೇರುತ್ತಿದ್ದರೂ ಜಿಲ್ಲಾಡಳಿತ ಮಾತ್ರ ಮೌನಕ್ಕೆ ಶರಣಾಗಿದೆ. ಶುದ್ಧ ಕುಡಿಯುವ ನೀರಿನ ಹರಿಕಾರ ಎಂದೇ ಹೆಸರಾಗಿರುವ ಸಚಿವ ಎಚ್.ಕೆ. ಪಾಟೀಲರು ಕುಡಿಯವ ನೀರಿನ ಗಂಭೀರ ಸಮಸ್ಯೆಗೆ ಬಗ್ಗೆ ನಗರಸಭೆ, ಜಿಲ್ಲಾಡಳಿತಕ್ಕೆ ಕಿವಿ ಹಿಂಡುವ ಮೂಲಕ ತಮ್ಮ ಕ್ಷೇತ್ರದ ಜನರ ನೀರಿನ ಬವಣೆ ನೀಗಿಸಬೇಕು ಎಂಬ ಅಭಿಪ್ರಾಯಗಳೂ ಕೇಳಿಬರತೊಡಗಿವೆ.



ಮುಖ್ಯವಾಗಿ, ಕೆಳ, ಮಧ್ಯಮ ವರ್ಗದ ಜನರು ಇನ್ನಷ್ಟು ಇಕ್ಕಟ್ಟಿಗೆ ಸಿಲುಕಿದ್ದಾರೆ. ಇತ್ತ ನೀರಿಗಾಗಿ ದಿನವಿಡೀ ಕಾಯುತ್ತ ನಿಂತರೆ ದುಡಿಮೆಗೆ ಹೋಗೋದು ಯಾವಾಗ, ದುಡಿಮೆಯೇ ಇಲ್ಲದಿದ್ದರೆ ಮನೆ ನಡೆಸೋದು ಹೇಗೆ ಎಂಬ ಚಿಂತೆ ಒಂದೆಡೆಯಾದರೆ, ಕೆಲಸಕ್ಕೆ ತೆರಳಿದ ಸಂದರ್ಭದಲ್ಲೇ ನೀರು ಪೂರೈಕೆಯಾಗಿಬಿಟ್ಟರೆ ನೀರಿಗೇನು ಮಾಡೋದು... ಇಂತಹ ಸಮಸ್ಯೆಗಳ ಹೊಯ್ದಾಟದಲ್ಲಿರುವ ಸಾರ್ವಜನಿಕರು, ಹಣವಂತರು ಟ್ಯಾಂಕರ್ ನೀರು ಹಾಕಿಸಿಕೊಳ್ಳುತ್ತಾರೆ. ಬಡ ವರ್ಗದವರಿಗೆ ಹೊತ್ತಿನ ಊಟ ಹೊಂದಿಸಿಕೊಳ್ಳುವುದೇ ಕಷ್ಟವಾಗಿರುವಾಗ ಟ್ಯಾಂಕರ್ ನೀರಿಗೆ ಎಲ್ಲಿಂದ ಹಣ ಹೊಂದಿಸೋಣ ಎಂಬಂತಾಗಿದೆ.

**ಶಾಲಾ ವಿದ್ಯಾರ್ಥಿಗಳಿಗೆ ರಾಗಿ ಮಾಲ್ಟ್ ವಿತರಣೆ ಕಾರ್ಯಕ್ರಮದಲ್ಲಿ ಶಾಸಕ ಜಿ.ಎಸ್. ಪಾಟೀಲ**

# ಉತ್ತಮ ಅಕ್ಷರ ಜ್ಞಾನವನ್ನು ಹೊಂದಿ

■ ವಿಜಯಸಾಕ್ಷಿ ಸುದ್ದಿ, ರೋಣ

ರೋಣ ಪಟ್ಟಣದ ಎಸ್.ಆರ್. ಪಾಟೀಲ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಅನೇಕ ಇತಿಹಾಸಗಳನ್ನು ಹೊಂದಿದ್ದು, ಈ ಶಾಲೆಗೆ ಬರುವ ಮಕ್ಕಳಿಗೆ ಎಸ್.ಆರ್. ಪಾಟೀಲ ಪ್ರತಿಷ್ಠಾನ ಸಮಿತಿಯಿಂದ ಬಸ್ ಸೌಲಭ್ಯ ಒದಗಿಸಲಾಗುವುದು ಎಂದು ಖನಿಜ ನಿಗಮದ ಅಧ್ಯಕ್ಷ, ಶಾಸಕ ಜಿ.ಎಸ್. ಪಾಟೀಲ ಘೋಷಿಸಿದರು.

ಅವರು ಗುರುವಾರ ಪಟ್ಟಣದ ಎಸ್.ಆರ್. ಪಾಟೀಲ ಶಾಲೆಯಲ್ಲಿ ಜರುಗಿದ ತಾಲೂಕು ಮಟ್ಟದ ಶ್ಯೂರ್ ರಾಗಿ ಮಾಲ್ಟ್ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಎಸ್.ಆರ್. ಪಾಟೀಲರವರ ನೇತೃತ್ವದಲ್ಲಿ ಪಟ್ಟಣದ ಹಿರಿಯರು ಸೇರಿ ಈ ಶಾಲೆಯನ್ನು ನಿರ್ಮಿಸಿದ್ದು ಇತಿಹಾಸವಾಗಿದೆ. ಒಟ್ಟು 30 ಕೊಠಡಿಗಳನ್ನು ಹೊಂದಿರುವ ಈ ಶಾಲೆಯ ನವೀಕರಣಕ್ಕಾಗಿ 90 ಲಕ್ಷ ರೂಗಳ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಿದ್ದು, ಶೀಘ್ರ ಕೆಲಸ ಆರಂಭವಾಗಲಿದೆ ಎಂದ ಅವರು, ಖಾಸಗಿ ಶಿಕ್ಷಣ ಸಂಸ್ಥೆಗಳ ಬಸ್ ಸೌಲಭ್ಯದಂತೆ ಈ ಶಾಲೆಗೆ ದಾಖಲಿಸುವ ಮಕ್ಕಳನ್ನು ಸಹ ಅವರ ಮನೆಯಿಂದ ಬಸ್‌ನಲ್ಲಿ ಕರೆತರಲು ವ್ಯವಸ್ಥೆ ಕಲ್ಪಿಸಲಾಗುವುದು ಹಾಗೂ ಶಾಲೆಗೆ ಬಸ್ಸನ್ನು ಸಹ ಒದಗಿಸಲಾಗುವುದು ಎಂದರು.



ಸರಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳು ಅಪೌಷ್ಠಿಕತೆಯಿಂದ ಬಳಲಬಾರದು ಎಂಬ ದೃಷ್ಟಿಯಿಂದ ಬಿಸಿಯೂಟ, ಕ್ಷೀರಭಾಗ್ಯ ಯೋಜನೆಗಳನ್ನು ಜಾರಿಗೆ ತರಲಾಯಿತು. ಈಗ 1ರಿಂದ 10ನೇ ತರಗತಿ ಮಕ್ಕಳಿಗೆ ಶಿಕ್ಷಣ ಇಲಾಖೆ, ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್ ಹಾಗೂ ಕೆಎಂಎಫ್ ಇವರುಗಳ ಸಹಯೋಗದಲ್ಲಿ ರಾಗಿ ಮಾಲ್ಟ್ ವಿತರಣೆ ನಡೆಯುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಮಕ್ಕಳು ಸರಕಾರದ ಸೌಲಭ್ಯಗಳನ್ನು ಪಡೆದುಕೊಂಡು ಉತ್ತಮ ಅಕ್ಷರ ಜ್ಞಾನವನ್ನು ಹೊಂದಬೇಕು. ಜೊತೆಗೆ ಶಾಲೆಯ ಹಾಗೂ ಕುಟುಂಬದ ಕೀರ್ತಿಯನ್ನು ಹೆಚ್ಚಿಸಬೇಕು ಎಂದು ಸಲಹೆ ನೀಡಿದರು.

> ಎಸ್.ಆರ್. ಪಾಟೀಲ ಸರಕಾರಿ ಶಾಲೆಯಲ್ಲಿ ಮಕ್ಕಳಿಗೆ ಆಟ ಆಡಲು ಸಾಕಷ್ಟು ಸ್ಥಳಾವಕಾಶವಿದೆ. ಬರುವ ಶೈಕ್ಷಣಿಕ ವರ್ಷದೊಳಗೆ ಉಳಿದಿರುವ ಜಾಗದಲ್ಲಿ ಸುಂದರ ಉದ್ಯಾನವನ್ನು ನಿರ್ಮಿಸಲು ಅಧಿಕಾರಿಗಳು ಮುಂದಾಗಬೇಕು. ಅಗತ್ಯ ನೆರವು ನೀಡಲು ನಾನು ಸಿದ್ಧನಿದ್ದು, ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೆ ತಕ್ಷಣ ಕಾರ್ಯಪ್ರವೃತ್ತರಾಗಬೇಕು.
>
> **- ಜಿ.ಎಸ್. ಪಾಟೀಲ.**
> ಶಾಸಕರು, ಖನಿಜ ನಿಗಮದ ಅಧ್ಯಕ್ಷರು.

ತಾ.ಪಂ ಇಒ ರವಿ ಎ.ಎನ್., ಎಸ್‌ಡಿಎಂಸಿ ಅಧ್ಯಕ್ಷ ಗದಿಗೇಪ್ಪ ಕಿರೇಸೂರ, ಯೂಸುಫ್ ಇಟಗಿ, ಮೌನೇಶ ಹಾದಿಮನಿ, ದಾವಲಸಾಬ ಬಾಡಿನ, ಬಿಇಓ ರುದ್ರಪ್ಪ ಹುರಳಿ, ಅಕ್ಷರದಾಸೋಹಾಧಿಕಾರಿ ಬಸವರಾಜ ಅಂಗಡಿ ಸೇರಿದಂತೆ ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.

## ಶಿಕ್ಷಕರ ಮನಗೆದ್ದ ಪುಟ್ಟಣ್ಣನವರಿಗೆ ಸನ್ಮಾನ



■ ವಿಜಯಸಾಕ್ಷಿ ಸುದ್ದಿ, ಗದಗ

ಸತತ 5ನೇ ಬಾರಿಗೆ ಬೆಂಗಳೂರು ಶಿಕ್ಷಕರ ಮತಕ್ಷೇತ್ರದಿಂದ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಪುಟ್ಟಣ್ಣ ಅವರು ಶಿಕ್ಷಕರ ಮನ ಗೆದ್ದ ಶಿಕ್ಷಕರ ರಕ್ಷಕ ಎಂದು ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ಡಾ.ಹನುಮಂತಗೌಡ ಆರ್.ಕಲ್ಮನಿ ಹೇಳಿದರು.

ಬೆಂಗಳೂರಿನಲ್ಲಿರುವ ಪುಟ್ಟಣ್ಣರವರ ಗೃಹ ಕಚೇರಿಗೆ ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ನಿಯೋಗ ತೆರಳಿ ಸಂಘದ ಪರವಾಗಿ ಸನ್ಮಾನಿಸಿ ಗೌರವಿಸಿದ ಸಂದರ್ಭದಲ್ಲಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಡಾ. ವಿನೋದಚೆಂದ ಪೀಟರ್, ಧಾರವಾಡ ಜಿಲ್ಲಾಧ್ಯಕ್ಷ ಸಿ.ಎಂ. ಕಲಕೇರಿ, ಕೆ.ಎನ್. ಪ್ರವೀಣ, ಎನ್.ಎಂ.ಕುಮಾರ್, ಮಹೇಶ್ ಬಿ.ಹೆಬ್ಬಾಳಕುಮಾರ್ ಸೇರಿದಂತೆ ಅತಿಥಿ ಉಪನ್ಯಾಸಕರ ಪ್ರಮುಖರು ಉಪಸ್ಥಿತರಿದ್ದರು.

**ಅಭ್ಯರ್ಥಿಗಳು ಕಡ್ಡಾಯವಾಗಿ ವಸ್ತ್ರ ಸಂಹಿತೆ ಪಾಲಿಸುವಂತೆ ಸೂಚನೆ**

## ಫೆ.25ರಂದು ಪೊಲೀಸ್ ಕಾನ್‌ಸ್ಟೇಬಲ್ ಪರೀಕ್ಷೆ

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಪೊಲೀಸ್ ಕಾನ್‌ಸ್ಟೇಬಲ್ (ಸಿವಿಲ್) (ಪುರುಷ ಮತ್ತು ಮಹಿಳಾ) & (ತೃತೀಯ ಲಿಂಗ ಪುರುಷ ಮತ್ತು ಮಹಿಳಾ) ಹಾಗೂ ಸೇವಾನಿರತ & ಬ್ಯಾಕ್ಲಾಗ್-1137 ಹುದ್ದೆಗಳ ಲಿಖಿತ ಪರೀಕ್ಷೆ ಫೆ.25ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 12.30 ಗಂಟೆಯವರೆಗೆ ಹುಬ್ಬಳ್ಳಿ-ಧಾರವಾಡ ನಗರದ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿವೆ.

ಪುರುಷ ಮತ್ತು ತೃತೀಯ ಲಿಂಗ ಪುರುಷ ಅಭ್ಯರ್ಥಿಗಳು ಅರ್ಧ ತೋಳಿನ ಶರ್ಟ್‌ಗಳನ್ನು ಕಡ್ಡಾಯವಾಗಿ ಧರಿಸಬೇಕು. ಸಾಧ್ಯವಾದಷ್ಟು ಕಾಲರ್ ರಹಿತ ಶರ್ಟ್‌ಗಳನ್ನು ಧರಿಸಬೇಕು. ಜಿಪ್ ಪ್ಯಾಕೆಟಗಳು, ದೊಡ್ಡ ಬಟನಗಳು ಇರುವ ಶರ್ಟ್‌ಗಳು ಹಾಗೂ ಜೀನ್ಸ್ ಪ್ಯಾಂಟ್ ಮತ್ತು ಹೆಚ್ಚಿನ ಜೇಬುಗಳಿರುವ ಪ್ಯಾಂಟ್‌ಗಳನ್ನು ಧರಿಸುವಂತಿಲ್ಲ. ಪರೀಕ್ಷಾ ಕೇಂದ್ರದೊಳಗೆ ಷೂಗಳನ್ನು ನಿಷೇಧಿಸಲಾಗಿದ್ದು, ಅಭ್ಯರ್ಥಿಗಳು ತೆಳುವಾದ ಅಡಿಭಾಗವಿರುವ ಪಾದರಕ್ಷೆಗಳನ್ನು (ಚಪ್ಪಲಿ) ಧರಿಸಬೇಕು. ಕುತ್ತಿಗೆ ಸುತ್ತಾ ಯಾವುದೇ ಲೋಹದ ಆಭರಣಗಳು ಅಥವಾ ಉಂಗುರ ಮತ್ತು ಕಡಗಳನ್ನು ಧರಿಸುವುದನ್ನು ನಿಷೇಧಿಸಲಾಗಿದೆ.

ಮಹಿಳಾ ಮತ್ತು ತೃತೀಯ ಲಿಂಗ ಮಹಿಳಾ ಅಭ್ಯರ್ಥಿಗಳು ವಿಸ್ತಾರವಾದ ಕಸೂತಿ, ಹೂಗಳು, ಬ್ರೂಚ್‌ಗಳು ಅಥವಾ ಬಟನ್ ಹೊಂದಿರುವ ಬಟ್ಟೆಗಳನ್ನು ಧರಿಸುವುದನ್ನು ನಿಷೇಧಿಸಲಾಗಿದೆ. ಪರೀಕ್ಷೆಯ ದಿನದಂದು ಪೂರ್ಣ ತೋಳಿನ ಬಟ್ಟೆಗಳನ್ನು, ಜೀನ್ಸ್ ಪ್ಯಾಂಟ್ ಧರಿಸಬಾರದು. ಅದರ ಬದಲಾಗಿ ಅರ್ಧ ತೋಳಿನ ಬಟ್ಟೆಗಳನ್ನು ಅವರಿಗೆ ಮುಜುಗರವಾಗದಂತೆ ಅಭ್ಯರ್ಥಿಗಳು ಧರಿಸುವಂತೆ ನಿರ್ದೇಶಿಸಲಾಗಿದೆ. ಎತ್ತರವಾದ ಹಿಮ್ಮಡಿಯ ಶೂ, ಚಪ್ಪಲಿಗಳನ್ನು ಮತ್ತು ದಪ್ಪವಾದ ಅಡಿಭಾಗ ಹೊಂದಿರುವ ಶೂ, ಚಪ್ಪಲಿಗಳನ್ನಾಗಲೀ ಧರಿಸಬಾರದು. ತೆಳುವಾದ ಅಡಿಭಾಗ ಹೊಂದಿರುವ ಚಪ್ಪಲಿಗಳು ಧರಿಸುವುದು ಕಡ್ಡಾಯವಾಗಿದೆ. ಮಂಗಳಸೂತ್ರ ಮತ್ತು ಕಾಲುಂಗರ ಹೊರತುಪಡಿಸಿ ಯಾವುದೇ ರೀತಿಯ ಲೋಹದ ಆಭರಣಗಳನ್ನು ಧರಿಸುವುದನ್ನು ನಿಷೇಧಿಸಿದೆ.

ಲಿಖಿತ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಕಡ್ಡಾಯವಾಗಿ ವಸ್ತ್ರ ಸಂಹಿತೆಯನ್ನು ಪಾಲಿಸಬೇಕೆಂದು ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತೆ ರೇಣುಕಾ ಸುಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಪಾದಕೀಯ

# ಮೊದಲು ಸದನಕ್ಕೆ ಬರಲಿ

ಸ್ಪೀಕರ್ ಯು.ಟಿ. ಖಾದರ್ ಅವರು ರಾಜ್ಯದ 224 ಶಾಸಕರಿಗೆ ರಾಜ್ಯ ಸರ್ಕಾರದ ಗಂಡಭೇರುಂಡ ಲಾಂಛನವುಳ್ಳ ಚಿನ್ನ ಲೇಪಿತ ಬ್ಯಾಡ್ಜ್ ವಿತರಿಸಿದ್ದಾರೆ. ಸುಮಾರು ಮೂರು ಸಾವಿರ ರೂಪಾಯಿ ಮೌಲ್ಯದ ಈ ಒಂದು ಬ್ಯಾಡ್ಜನ್ನು ಪ್ರತಿಯೊಬ್ಬ ಶಾಸಕರಿಗೂ ಕೊಟ್ಟಿದ್ದಾರೆ. ವಿಧಾನಸೌಧಕ್ಕೆ ಬರುವಾಗ ಕಡ್ಡಾಯವಾಗಿ ಈ ಬ್ಯಾಡ್ಜ್ ಧರಿಸಿ ಬರಬೇಕು ಎನ್ನುವ ಸೂಚನೆ ಒಂದನ್ನು ನೀಡಿದ್ದಾರೆ.

ರಾಜ್ಯದ ಎಲ್ಲ ಶಾಸಕರಿಗೆ ತಲಾ ಮೂರು ಬ್ಯಾಡ್ಜ್‌ಗಳನ್ನ ಖಾದರ್ ನೀಡಿದ್ದಾರೆ. ಒಂದು ತಮ್ಮ ಸ್ವ ಕ್ಷೇತ್ರದಲ್ಲಿ ಇರಿಸಿಕೊಳ್ಳಬೇಕು, ಮತ್ತೊಂದು ಬೆಂಗಳೂರಿನಲ್ಲಿರಬೇಕು, ಇನ್ನೊಂದು ಬ್ಯಾಡ್ಜ್ ಪ್ರತಿನಿತ್ಯ ಬಳಕೆ ಮಾಡಬೇಕು ಎಂದು ಸ್ಪೀಕರ್ ಯು.ಟಿ. ಖಾದರ್ ಸೂಚನೆ ಕೊಟ್ಟಿದ್ದಾರೆ.

ಪ್ರತಿಯೊಬ್ಬ ಶಾಸಕರಿಗೆ ಈ ರೀತಿಯ ಚಿನ್ನ ಲೇಪಿತ ಗಂಡಭೇರುಂಡ ಲಾಂಛನ ಇರುವ ಒಂದು ಕಿಟ್ ನೀಡುವ ಮೂಲಕ ಲಕ್ಷಾಂತರ ರೂಪಾಯಿ ವ್ಯಯಿಸಿದ್ದಾರೆ. ಆಸ್ಟ್ರೇಲಿಯಾದ ಮೇಯರ್ ಒಬ್ಬರು ಯು ಟಿ ಖಾದರ್ ಅವರಿಗೆ ಈ ರೀತಿಯ ಉಡುಗೊರೆ ನೀಡಿದ್ದರು. ಅದರಿಂದ ಪ್ರೇರಿತರಾಗಿ ಖಾದರ್ ಸಾಹೇಬರು ಕರ್ನಾಟಕದಲ್ಲಿ ಆ ರೀತಿಯ ಸಂಪ್ರದಾಯಕ್ಕೆ ಮುಂದಡಿ ಇಟ್ಟಿದ್ದಾರೆ.

ಸ್ಪೀಕರ್ ಅವರ ಈ ನಡೆಯು ಅತ್ಯಂತ ಒಳ್ಳೆಯದೆ. ಆದರೆ ರಾಜ್ಯದ 224 ಶಾಸಕರ ಪೈಕಿ ಬಹುತೇಕ ಜನರಿಗೆ ಅಧಿವೇಶನದ ಗಂಭೀರತೆ ಅರ್ಥವಾಗಿಲ್ಲ. ಅತ್ಯಂತ ಹಿರಿಯ ಸಚಿವರು ಸಹ ಸದನಕ್ಕೆ ಗೈರಾಗುವುದನ್ನು ರಾಜ್ಯದ ಜನ ಕಂಡಿದ್ದಾರೆ. ಎಷ್ಟೋ ಸಂದರ್ಭದಲ್ಲಿ ಸಚಿವರು ಇಲ್ಲದ್ದಕ್ಕೆ ಖಾದರ್ ಅವರು ಅಸಮಾಧಾನಗೊಂಡಿದ್ದು ಇದೆ.

ಇದು ಕೇವಲ ಸ್ಪೀಕರ್ ಯು.ಟಿ. ಖಾದರ್ ಅಧಿಕಾರಾವಧಿಯ ಅನುಭವ ಮಾತ್ರ ಅಲ್ಲ. ಈ ಹಿಂದಿನ ಅವಧಿಯಲ್ಲಿ ಸಚಿವರು ಶಾಸಕರು ಸದನಕ್ಕೆ ಗೈರಾಗುವುದು ಸರ್ವೆ ಸಾಮಾನ್ಯ. ಇಂತಹ ಸಂದರ್ಭದಲ್ಲಿ ಸಚಿವರು, ಶಾಸಕರು ಚಿನ್ನ ಲೇಪಿತ ಲಾಂಛನವನ್ನು ಧರಿಸಿಕೊಂಡು ಬರಬೇಕು ಎಂದು ಸೂಚನೆ ಕೊಡುವ ಜೊತೆಗೆ, ತಪ್ಪದೇ ಬರಬೇಕು ಎನ್ನುವ ಕಟ್ಟಳೆ ವಿಧಿಸಬೇಕಾಗಿದೆ.

ಇನ್ನು ಕೊಟ್ಟಿರುವ ಲಾಂಛನಗಳನ್ನ ಸದ್ಬಳಕೆ ಮಾಡಿಕೊಳ್ಳಬೇಕು. ಶಿಸ್ತು ಪಾಲನೆಗೆ ಲಾಂಛನ ಮುನ್ನುಡಿ ಬರೆಯುವಂತಾಗಬೇಕು. ಇದೆಲ್ಲದಕ್ಕಿಂತ ಮುಖ್ಯವಾಗಿ ಎಲ್ಲ ಶಾಸಕರು, ಸಚಿವರು ಅಧಿವೇಶನದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಅಂದಾಗ ಮಾತ್ರ ಸ್ಪೀಕರ್ ಅವರ ಆಶಯ ಈಡೇರುತ್ತದೆ.

### ರಂಗಿನ ದುನಿಯಾದಲ್ಲಿ 'ರೀಲ್ ರಾಜ'ರದ್ದೇ ದರ್ಬಾರು!

# ನೀವೂ ಸೋಶಿಯಲ್ ಮೀಡಿಯಾದಲ್ಲಿದ್ದೀರಾ?

ಈಗಿನ ಜಗತ್ತು ಒಂಥರಾ ವಿಚಿತ್ರವಾಗಿದೆಯಲ್ವಾ? ತನ್ನ ತಂದೆ-ತಾಯಿಯರನ್ನ ವೃದ್ಧಾಶ್ರಮಕ್ಕೆ ಸೇರಿಸಿದವನೊಬ್ಬ ರಸ್ತೆಯ ಬದಿಯಲ್ಲಿ ಹೊಟ್ಟೆಗಿಲ್ಲದೇ ಸುಸ್ತುಬಡಿದು ನರಳಾಡುತ್ತಿದ್ದ ವೃದ್ಧನೊಬ್ಬನಿಗೆ ಬ್ರೆಡ್ಡು-ಬಿಸ್ಕೇಟು ತಿನ್ನಿಸಿದ ಫೋಟೋ ಫೇಸ್ಬುಕ್‌ನಲ್ಲಿ ಹಾಕಿ ಸಾವಿರಾರು ಲೈಕ್, 'ನೀವು ಗ್ರೇಟ್ ಕಣ್ರೀ...' ಎಂಬಂಥಹ ಕಮೆಂಟುಗಳನ್ನು ಪಡೆಯುತ್ತಾನೆ. ಅಸಹಾಯಕನಿಗೆ ನೆರವಾಗಿದ್ದು ಮನುಷ್ಯತ್ವವೆನಿಸಿದರೂ, ಫೋಟೋ/ಸೆಲ್ಫೀ ತೆ-ಗೆದು ಸೋಶಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿಕೊಂಡಿದ್ದು?! ನಮ್ಮಲ್ಲೊಬ್ಬರು ಮರಿ ಪುಢಾರಿ ಇಲ್ಲಿರುವ ಬೆಲೆಬಾಳುವ ಸಾಗುವಾನಿ ಮರಗಳನ್ನು ರಾತ್ರೋರಾತ್ರಿ ಕಡಿದು ಸಾಗಿಸುತ್ತಲೇ ಕೋಟ್ಯಾಧಿಪತಿಯಾಗಿದ್ದಾರೆ. ಆದರೀಗ ಆ ವ್ಯಕ್ತಿ ಸ್ವಲ್ಪ ಹಿರಿಯ ರಾಜಕಾರಣಿಯಾಗಿ, ಆರಕ್ಕೂ ಏರದೇ, ಮೂರಕ್ಕೂ ಇಳಿಯದ ಅಂತಂತ್ರ ಸ್ಥಿತಿಯಲ್ಲಿ ಅಲ್ಲಿ ಇಲ್ಲಿ ವನಮಹೋತ್ಸವವೆಂದು ಗಿಡ ನೆಟ್ಟು, ನೀರುಣಿಸುವ ಫೋಟೋ ಪ್ರತೀ ವರ್ಷ ಅವರ ಫೇಸ್ಬುಕ್ ಖಾತೆಯಲ್ಲಿ ಅಪ್ಲೋಡ್ ಆಗುತ್ತವೆ! ಗಿಡ ನೆಟ್ಟು ನೀರುಣಿಸಿದ್ದು ಪರಿಸರ ಕಾಳಜಿಯೇನೋ ಸರಿ, ಫೋಟೋಗೆ ಬಂದ ಲೈಕ್‌ಗಳನ್ನು ಎಣಿಸಿದ್ದು?!

ಅದೆಲ್ಲಾ ಬಿಡಿ, ನಮ್ಮ ನಿಮ್ಮ ನಡುವೆಯಿರುವವರೇ 'ಓಹ್, ನನ್ ಅದೊಂದು ಪೋಸ್ಟ್ಗೆ ಎಷ್ಟು ಲೈಕ್ಸ್, ಕಮೆಂಟ್ಸ್ ಬಂತೂ ಅಂತರ್ರೀ...!' 'ಈವತ್ತು ಬೆಳಿಗ್ಗೆ ತಾನೇ ಒಂದು ಸೆಲ್ಫೀನ ಫೇಸ್ಬುಕ್‌ಗೆ ಹಾಕಿದೆ, ಆಗ್ಲೇ ಸಾವಿರ ಲೈಕ್ಸ್ ದಾಟಿದ್ಯೇ!' ಅಂತ ಮಾತಾಡಿಕೊಳ್ಳೋದನ್ನ ಅದೆಷ್ಟು ಬಾರಿ ಕೇಳಿಲ್ಲ ಹೇಳಿ?! ಅಲ್ಲಿಗೆ, ಸೋಶಿಯಲ್ ಮೀಡಿಯಾದಲ್ಲಿ ಲೈಕ್/ಕಮೆಂಟ್/ರಿವ್ಯೂಗಳಿಗೆ ಅಷ್ಟರ ಮಟ್ಟಿಗೆ ಮಹತ್ವವಿದೆ ಅನ್ನೋದನ್ನ ಒಪ್ಪದೇ ವಿಧಿಯೇ ಇಲ್ಲ! ಇಷ್ಟಕ್ಕೂ, ಒಬ್ಬೊಬ್ಬರ ಒಂದೊಂದು ಪೋಸ್ಟ್ಗೆ ಸಾವಿರ, ಲಕ್ಷದ ಸಂಖ್ಯೆಯಲ್ಲಿ ಲೈಕ್‌ಗಳು, 'ಭಾಳಾ ಚೆನ್ನಾಗಿದೆ' ಎಂಬರ್ಥದ ಕಮೆಂಟುಗಳು




ಪುಂಕಾನುಪುಂಖವಾಗಿ ಬರೋದೆಲ್ಲಾ ನಿಜವಾ? ಲೈಕುಗಳು ಹೆಚ್ಚಾದಹಾಗೆ ಪೋಸ್ಟ್ ಮಾಡಿದವರಿಗೇನು ಪ್ರಯೋಜನ? ಅವರಿಗೇನು ಸಿಗುತ್ತೆ? ನೂರಾರು ಪ್ರಶ್ನೆಗಳು ಹೊಗೆ ಕುಡಿದ ಜೇನುಗೂಡಿನಿಂದ ಹೊರಬಿದ್ದ ಜೇನುಹುಳಗಳಂತೆ ತಲೆಸುತ್ತ ಹಾರಾಡುತ್ತವೆಯಲ್ಲವಾ? ಇದೊಂಥರಾ ರಂಗಿನ ದುನಿಯಾ ಕಣ್ರೀ!

ಇಷ್ಟಕ್ಕೂ ಈ ಫೇಸ್ಬುಕ್, ಟಿಕ್‌ಟಾಕ್, ಇನ್ಸ್ಟಾಗ್ರಾಂ, ಯುಟ್ಯೂಬ್ ಇತ್ಯಾದಿ ಇತ್ಯಾದಿ ಸಮೂಹ ಸನ್ನಿಗಳಿಂದಾಗುವ ಲಾಭವಾದರೂ ಏನು? ಕೇವಲ ಜನರ ಚಿತ್ತ ಸೆಳೆದು ಒಂದಿಷ್ಟು ಲೈಕ್, ಕಮೆಂಟ್, ಸಬ್‌ಸ್ಕ್ರೈಬರ್‌ಗಳನ್ನು ಪಡೆದು ಹೆಸರು ಗಳಿಸಿ ಸ್ಟಾರ್ ಆಗುವದಷ್ಟೇ ಉದ್ದೇಶವಾ? ಇಂಥವುಗಳ ಮೂಲಕ ತಲೆಯಲ್ಲಿರುವ ಒಂದಿಷ್ಟು ಕ್ರಿಯಾತ್ಮಕತೆಯನ್ನು ಹೊರಹಾಕಿ ಖುಷಿಪಡುವದಾ ಅಥವಾ ಹೇಗೂ ಬಿಡುವಾಗಿರ್ತೀನಿ, ಇದನ್ನಾದ್ರೂ ಮಾಡಿ ಖುಷಿ ಪಡೋಣವೆನ್ನುವ ಉದ್ದೇಶವಾ? ಇವೆಲ್ಲವೂ ಹೌದಾದರೂ, ಅದರಾಚೆಗಿನ ಇನ್ನೊಂದು ಉದ್ದೇಶವೂ ಇದೆ. ಅಕೌಂಟ್‌ಗಳಲ್ಲಿನ ಸರಕುಗಳಿಂದ ಟ್ರಾಫಿಕ್ ಸೃಷ್ಟಿಸಿ, ಗೂಗಲ್ ಮನಿಟೈಸೇಷನ್ ಮೂಲಕ ಆದಾಯ ಪಡೆಯೋದು! ಇದೊಂಥರ ಸಾರ್ವಭೌಮನಿದ್ದಂತೆ. ಫೇಸ್ಬುಕ್, ಟ್ವೀಟ್, ಯುಟ್ಯೂಬ್ ಚಾನೆಲ್, ಇನ್ಸ್ಟಾಗ್ರಾಂ, ಬ್ಲಾಗ್, ವ್ಲಾಗ್, ವೆಬ್‌ಸೈಟುಗಳು, ಬೇರೆಬೇರೆ ಸೋಶಿಯಲ್ ಮೀಡಿಯಾದ ಪೋಸ್ಟ್ಗಳು, ಗೂಗಲ್ ಪ್ಲೇಸ್ಟೋರ್ ಅಪ್ಲಿಕೇಶನ್‌ಗಳು...ಹೀಗೆ ಏನೇ ಇದ್ದರೂ ಮಾನಿಟರ್ ಮಾಡಿ, ಅತಿಹೆಚ್ಚು ಟ್ರಾಫಿಕ್ ಸೃಷ್ಟಿಯಾಗುವ, ಅತಿಹೆಚ್ಚು ಡೌನ್ಲೋಡ್, ವೀವ್ಸ್, ವಿಸಿಟ್ ಆಗುವ ಸೈಟ್, ಖಾತೆ, ಚಾನೆಲ್ ಅಕೌಂಟ್‌ಗಳಲ್ಲಿ ಜಾಹೀರಾತುಗಳನ್ನು ಬಿತ್ತರಿಸುತ್ತದೆ. ಅತೀಹೆಚ್ಚು ಹಣ ಪಾವತಿಸುವ ಜಾಹೀರಾತುಗಳು ಇಂಥ ಖಾತೆಗಳಲ್ಲಿ ಪ್ರದರ್ಶನಗೊಳ್ಳಲು ಪ್ರಾರಂಭವಾಗುತ್ತವೆ.

ಇನ್ನು, ವಿಷಯಕ್ಕೆ ಬರುವದಾದರೆ, ಗೂಗಲ್‌ನಿಂದ ಆದಾಯ ಪಡೆಯುವಷ್ಟು ಚಂದಾದಾರರನ್ನು, ವೀವ್ ಅವರ್‌ಗಳನ್ನು, ಲೈಕ್-ಕಮೆಂಟ್‌ಗಳನ್ನು ಎಲ್ಲರೂ ಪಡೆಯಬಹುದಾ? ಇದಕ್ಕೇನಾದರೂ ಬೇರೆ ದಾರಿಗಳಿವೆಯಾ? ಉಹೂ. ಸಧ್ಯಕ್ಕೆ ಇಲ್ಲವೆಂತಲೇ ಹೇಳಬಹುದು. ಇಂಥವನ್ನೆಲ್ಲ ನೋಡಿಯೇ ಕೆಲ ಯುಟ್ಯೂಬರ್‌ಗಳು ಹೊಸ ಹೊಸ ವರಸೆಗಳನ್ನು ಕಲಿಯುತ್ತಿದ್ದಾರೆ. ಯಾವುದೋ ಒಂದು ಕುತೂಹಲಕಾರಿ ತಲೆಬರಹ ಕೊಟ್ಟು, ಪ್ರಾರಂಭದ ಕ್ಷಣದಿಂದ ವಿಡಿಯೋ ಮುಗಿಯುವ ಕೊನೆಯ ಐದತ್ತು ಸೆಕೆಂಡುಗಳವರೆಗೂ ವಿಷಯವನ್ನೇ ಹೇಳದಿರುವುದು! ಕುತೂಹಲ ಕಳೆಯುವ ಉದ್ದೇಶಕ್ಕಾದರೂ ವಿಡಿಯೋ ಸ್ಕಿಪ್ ಮಾಡದೇ ವಿಡಿಯೋ ನೋಡಲೆಂಬ ಯೋಚನೆ!

ಇನ್ನು, ಕೆಲ ಸೆಲೆಬ್ರಿಟಿಗಳು, ಇ-ಕಾಮರ್ಸ್ ಸೈಟ್‌ಗಳು ಪ್ರಚಾರ, ತಮ್ಮ ವ್ಯವಹಾರ ವೃದ್ಧಿಸಿಕೊಳ್ಳುವ ಉದ್ದೇಶಕ್ಕೆ ಒಂದಿಷ್ಟು ಅಡ್ಡದಾರಿ ಹಿಡಿದಿರುವ ಬಗ್ಗೆ ಈಗಾಗಲೇ ಗೊತ್ತಾಗಿರುವ ವಿಚಾರ. ಅವರಿಗೆ ಹತ್ತು ರೂ. ಹಾಕಿ, ನೂರು ರೂ. ತೆಗೆಯುವ ತವಕ. ಇನ್ನೂ ಹೆಚ್ಚು ಪ್ರಸಿದ್ಧಿ ಹೊಂದಿ, ನಿಮಗಿಂತ ನಾವೇ ಮೇಲು ಎಂದು ಬಿಂಬಿಸುವುದೇ ಉದ್ದೇಶ. ಇವರು ಮಾಡುವ ಕೆಲಸವೆಂದರೆ, ಒಂದಿಷ್ಟು ಯುವಕರನ್ನು ನೇಮಿಸಿಕೊಂಡು ತಮ್ಮ ಸೈಟ್‌ಗಳಲ್ಲಿ ಮಾರಾಟಕ್ಕಿರುವ ಥರಾವರಿ ವಸ್ತುಗಳ ಬಗ್ಗೆ ಅತ್ಯುತ್ತಮ ಪ್ರಾಡಕ್ಟ್ ಎಂಬರ್ಥದ ಯೂಸರ್ ರಿವ್ಯೂಗಳನ್ನು ಬರೆಯುವುದು ಮತ್ತು, ಪ್ರತಿಸ್ಪರ್ಧಿ ತಾಣಗಳ ಪ್ರಾಡಕ್ಟ್‌ಗಳಿಗೆ ಡಬ್ಬಾ ಉತ್ಪನ್ನವೆನ್ನುವಂಥ ಕಮೆಂಟ್‌ಗಳನ್ನು ಬರೆಯುವದು! ಇನ್ನೊಂದೆಡೆ, ಸೆಲೆಬ್ರಿಟಿಗಳು ಪೋಸ್ಟ್ ಮಾಡುವ ಹೇಳಿಕೆ, ವಿಡಿಯೋಗಳಿಗೆ ಲೈಕ್ ಒತ್ತಿ ಶೇರ್ ಮಾಡುವುದು, ಸೂಪರ್ ಎಂಬರ್ಥದ ಕಮೆಂಟ್ ಬರೆಯುವದೇ ಉದ್ಯೋಗ! ಒಂದು ಲೈಕ್, ಕಮೆಂಟ್, ಶೇರ್‌ಗೆ ಪೈಸೆಗಳಿಂದ ರೂಪಾಯಿವರೆಗೆ ಸಂಭಾವನೆ! ಬ್ರೌಸರ್‌ನಲ್ಲಿ ಎಷ್ಟು ಸಾಧ್ಯವೋ ಅಷ್ಟು ಸುಳ್ಳೇ ಸುಳ್ಳು ಖಾತೆಗಳನ್ನು ತೆರೆದು ಲೈಕ್ ಒತ್ತುವುದೇ ಕೆಲಸ. ಹೀಗೂ ಉಂಟೇ? ಖಂಡಿತಾ ಉಂಟು! ಇನ್ನೂ ವಿಷಯಗಳಿವೆ, ಮತ್ತೆ ಹಂಚಿಕೊಳ್ಳೋಣ.

## ಬಿಎಸ್‌ಎನ್‌ಎಲ್ ಸಿಮ್ ಹೊಂದಿದ ಗ್ರಾಹಕರ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಬಿಎಸ್‌ಎನ್‌ಎಲ್ ಸಿಮ್ ಹೊಂದಿದ ಎಲ್ಲಾ ಗ್ರಾಹಕರನ್ನು ಡಿಜಿಟಲ್ ಮೋಡ್‌ನಲ್ಲಿ ಮರುಪರಿಶೀಲಿಸುವಂತೆ ನಿರ್ದೇಶಿಸಲಾಗಿದೆ. ರಿವರ್ಫಿಕೇಶನ್ ಎನ್ನುವುದು ಅಸ್ತಿತ್ವದಲ್ಲಿರುವ ಗ್ರಾಹಕರ ಗುರುತನ್ನು ದೃಢೀಕರಿಸುವ ಪ್ರಕ್ರಿಯೆಯಾಗಿದೆ. ಗ್ರಾಹಕರು ಯಾವುದೇ (ಬಿಎಸ್‌ಎನ್ ಎಲ್ ) ಫ್ರಾಂಚೈಸಿಗಳು ಮತ್ತು ಚಿಲ್ಲರೆ ವ್ಯಾಪಾರಿಗಳ ಅಂಗಡಿಗಳಲ್ಲಿ ತಮ್ಮ ಮೊಬೈಲ್ ಸಂಖ್ಯೆಯನ್ನು (ಸಿಮ್) ಮರು ಪರಿಶೀಲಿಸಬಹುದು.

ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಗ್ರಾಹಕರು ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ಅಥವಾ ಡ್ರೈವಿಂಗ್ ಲೈಸೆನ್ಸ್ ನ ಮೂಲ ಗುರುತಿನ ಪುರಾವೆಯನ್ನು ಒಯ್ಯಬೇಕಾಗುತ್ತದೆ. ಮರು ಪರಿಶೀಲನೆಯ ಅಗತ್ಯವಿರುವ ಮೊಬೈಲ್ ಸಂಖ್ಯೆಗೆ ಓಟಿಪಿ ಬರುತ್ತದೆ. ಗ್ರಾಹಕರು ಫೆಬ್ರವರಿ 29 ರೊಳಗೆ ಮರುಪರಿಶೀಲನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಹತ್ತಿರದ ಬಿಎಸ್‌ಎನ್‌ಎಲ್, ಎನ್‌ಎಲ್ ಅಥವಾ ಫ್ರ್ಯಾಂಚೈಸಿ/ರೀಟೇಲರ್ ಅಂಗಡಿಗೆ ಭೇಟಿ ನೀಡುವಂತೆ ಬಿಎಸ್‌ಎನ್‌ಎಲ್ ಕಚೇರಿ ಪ್ರಕಟಣೆ ತಿಳಿಸಿದೆ.

## ಗ್ರಾಹಕರ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಬಿಎಸ್‌ಎನ್‌ಎಲ್ ಟೆಲಿಕಾಂ ಸೇವೆಗಳ (ಎಮ್‌ಟಿಟಿಎಚ್) ಗ್ರಾಹಕರಿಗೆ ತಿಳಿಯಪಡಿಸುವುದೇನೆಂದರೆ ಬಿಎಸ್‌ಎನ್ ಎಲ್ ನೆಟ್‌ವರ್ಕನಲ್ಲಿ ಗಣನೀಯ ಸುಧಾರಣೆ ತರಲು ಮತ್ತು ಅಸ್ತಿತ್ವದಲ್ಲಿರುವ ವೈರ್ ಲೈನ್ ಸಂಪರ್ಕಗಳ್ನು ತಾಮ್ರದ ಮಾಧ್ಯಮದಿಂದ ಫೈಬರ್ ಮಾಧ್ಯಮದ ಮೂಲಕ (ಎಮ್‌ಟಿಟಿಎಚ್) ಗೆ ಪರಿವರ್ತಿಸುವುದು, ಆತ್ಮನಿರ್ಭರ್ ಭಾರತ ಮಿಷನ್ ಅಡಿಯಲ್ಲಿ ಸ್ಥಳೀಯವಾಗಿ ಅಭಿವೃದ್ಧಿ ಪಡಿಸಿದ ತಂತ್ರಜ್ಞಾನಗಳಿಂದ ಚಾಲಿತವಾಗಿರುವ 4ಜಿ/ 5ಜಿ ತಂತ್ರಜ್ಞಾನದ ಪ್ರಸರಣ ವ್ಯವಸ್ಥೆಯನ್ನು ಬಳಸಿಕೊಂಡು ಗ್ರಾಹಕರಿಗೆ ಉತ್ತಮ ಟೆಲಿಕಾಂ ಕವರೇಜ್ ಮತ್ತು ಅಡೆತಡೆಯಿಲ್ಲದ ಸುಧಾರಿತ ಮೊಬೈಲ್ ಸೇವೆಗಳನ್ನು ಒದಗಿಸುವುದು ಸೇರಿದಂತೆ ಉನ್ನತ ದರ್ಜೆಯ ಕೆಲಸವನ್ನು ಕೈಗೊಳ್ಳುತ್ತಿದೆ.

ಬಿಎಸ್‌ಎನ್ ಎಲ್ ನೆಟ್‌ವರ್ಕ ನವೀಕರಣ / ಆಧುನೀಕರಣವನ್ನು ಕೈಗೊಂಡಿರುವುದರಿಂದ ಗ್ರಾಹಕರು ಆಗಾಗ್ಗೆ ಅನಾನುಕೂಲತೆಯನ್ನು ಅನುಭವಿಸಬಹುದು. ಇದಕ್ಕಾಗಿ ಬಿಎಸ್‌ಎನ್‌ಎಲ್ ತೀವ್ರವಾಗಿ ವಿಷಾದಿಸುತ್ತವೆ.

ಸರ್ಕಾರದ ಆದ್ಯಾದೇಶದೊಂದಿಗೆ ಬಿಎಸ್‌ಎನ್ ಎಲ್ ಒಂದು ಸರ್ಕಾರಿ ಕಂಪನಿ ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡಲು ಸಾರ್ವಜನಿಕರಿಗೆ ಆಯ್ಕೆ ಮಾಡಲು ಟೆಲಿಕಾಂ ವಲಯದಲ್ಲಿ ಆರೋಗ್ಯಕರ ಸ್ಪರ್ಧೆಯನ್ನು ನಿರ್ವಹಿಸಲು ಮತ್ತು ಏಕಸ್ವಾಮ್ಯದ ಶಕ್ತಿಗಳನ್ನು ದೂರವಿರಿಸಲು ಬದ್ಧವಾಗಿದೆ. ಗ್ರಾಹಕರು ಮಾರುಕಟ್ಟೆಯ ವದಂತಿಗಳು / ಊಹಾ ಪೋಹಗಳು, ಹರಡುವ ಸುಳ್ಳು ಸುದ್ದಿಗಳಿಂದ ದಾರಿ ತಪ್ಪದೇ ಬಿಎಸ್‌ಎನ್ ಎಲ್ ಉಪಯೋಗಿಸಲು ಬಿಎಸ್‌ಎನ್ ಎಲ್ ಕಚೇರಿ ಪ್ರಕಟಣೆ ತಿಳಿಸಿದೆ.


## ಸಂತೆ ಕರ ಲಿಲಾವು

■ ವಿಜಯಸಾಕ್ಷಿ ಸುದ್ದಿ, ಗದಗ

2024-25ನೇ ಸಾಲಿನ ಮಂಗಳವಾರ ಹಾಗೂ ಗುರುವಾರ ಸಂತೆ ಕರ ಲಿಲಾವನ್ನು ಫೆಬ್ರವರಿ 26ರಂದು ಮಧ್ಯಾಹ್ನ 3 ಗಂಟೆಗೆ ರೋಣ ಪುರಸಭೆ ಕಾರ್ಯಾಲಯದ ಆವರಣದಲ್ಲಿ ಮಾಡಲಾಗುವುದು.

ಲಿಲಾವಿನಲ್ಲಿ ಭಾಗವಹಿಸುವವರು ಠೇವಣಿ ಮೊತ್ತವನ್ನು ಮುಖ್ಯಾಧಿಕಾರಿಗಳು ಪುರಸಭೆ ರೋಣ ಇವರ ಹೆಸರಿನಲ್ಲಿ ಡಿಡಿ/ ಚೆಕ್ ಮುಖಾಂತರ ಫೆಬ್ರವರಿ 26 ರಂದು ಮಧ್ಯಾಹ್ನ 1 ಗಂಟೆಯೊಳಗಾಗಿ ಸಂಬಂಧಿಸಿದ ವಿಷಯ ನಿರ್ವಾಹಕರ ಹತ್ತಿರ ನೀಡಿ ಲಿಲಾವುಗಳ ಕುರಿತು ಹೆಚ್ಚಿನ ಮಾಹಿತಿ ಬೇಕಾದಲ್ಲಿ ರೋಣ ಪುರಸಭೆ ಉಪವಿಭಾಗಾಧಿಕಾರಿಗಳ ಕಾರ್ಯಾಲಯದಲ್ಲಿ ಪ್ರಕಟಿಸಲಾಗುವುದು.

## ಗುರು ಚರಿತ್ರೆ ಸಪ್ತಾಹ ಪ್ರಾರಂಭ, ವಿಶೇಷ ಪೂಜೆ



■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದ ಮಸ್ಕಿಯವರ ಓಣಿಯ ಗುರು ದತ್ತಾತ್ರೇಯ ದೇವಸ್ಥಾನದಲ್ಲಿ ಗುರುಪ್ಯಾಡಮಿ ಪ್ರಯುಕ್ತ ಏಳು ದಿನದ ಶ್ರೀಗುರು ಚರಿತ್ರೆ ಸಪ್ತಾಹ ಪ್ರಾರಂಭೋತ್ಸವ ಹಾಗೂ ವಿವಿಧ ಪೂಜಾ, ಧಾರ್ಮಿಕ ಕಾರ್ಯಕ್ರಮಗಳು ವೈಭವದಿಂದ ನಡೆಯಲಿದೆ ಎಂದು ಡಾ.ರಾಮಶಾಸ್ತ್ರೀ ಜೀರೆ ಹೇಳಿದರು.

ಸ್ಥಳೀಯ ದತ್ತ ಮಂಡಳಿ ವತಿಯಿಂದ ದತ್ತಾತ್ರೇಯ ದೇವಸ್ಥಾನದಲ್ಲಿ ಮಂಗಳವಾರ ನಡೆದ 2ನೇ ದಿನದ ಗುರು ಚರಿತ್ರೆ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗುರುವಿನ ಪಾತ್ರ ಅನನ್ಯವಾಗಿದ್ದು, ಗುರು ಚರಿತ್ರೆ ಪಾರಾಯಣ ಎಲ್ಲ ಭಕ್ತರು ಮಾಡಬೇಕು. ಅಜ್ಞಾನವನ್ನು ಹೋಗಲಾಡಿಸಿ ಸುಜ್ಞಾನ ಬೆಳಕಿನ ದಾರಿ ತೋರಿಸುವ ಗುರು ಎರಡನೇ ತಾಯಿ ಇದ್ದಂತೆ. ಭಗವಂತನಿಗೆ ನಮಸ್ಕರಿಸುವ ಮೊದಲು ಗುರುವಿಗೆ ನಮಿಸಬೇಕು. ಪವಿತ್ರ ಭಾವನೆಯಿಂದ ಸದಾ ಗುರುಸ್ಮರಣೆ ಮಾಡುವದರಿಂದ ಜೀವನ ಪಾವನಗೊಂಡು ಬದುಕು ಶಾಂತಿ-ನೆಮ್ಮದಿ ಕಾಣುವದು ಎಂದರು.

ದೇಗುಲದಲ್ಲಿ ಪ್ರತಿದಿನ ಬೆಳಿಗ್ಗೆ 5ಕ್ಕೆ ಕಾಕಡಾರತಿ, ಸುಪ್ರಭಾತ, ಬೆಳಿಗ್ಗೆ 8.30ಕ್ಕೆ ಮಹಾರುದ್ರಾಭಿಷೇಕ ಹಾಗೂ ವೇ.ಮೂ. ಕಲ್ಲಿನಾಥಶಾಸ್ತ್ರೀ ಜೀರೆ ಅವರಿಂದ ಗುರು ಚರಿತ್ರೆ ಪಾರಾಯಣ ಹೀಗೆ ಏಳು ದಿನ ಧಾರ್ಮಿಕ ಕಾರ್ಯಕ್ರಮ ನಡೆಯಲಿದ್ದು, ಫೆ.25ರಂದು ಪಾರಾಯಣ ಮಂಗಲಗೊಳ್ಳಲಿದೆ. ಪ್ರತಿದಿನ ಗುರುದತ್ತಾತ್ರೇಯನಿಗೆ ವಿಶೇಷ ಅಲಂಕಾರ, ಪೂಜೆ, ಸಂಜೆ ಭಜನೆ, ವಿವಿಧ ಸೇವೆಗಳ ಬಳಿಕ ಶೇಜಾರತಿಯೊಂದಿಗೆ ತೀರ್ಥ ಪ್ರಸಾದ ನಡೆಯಲಿದೆ ಎಂದರು.

ಈ ವೇಳೆ ಕಲ್ಲಿನಾಥಶಾಸ್ತ್ರೀ ಜೀರೆ, ಶಾರದಾಬಾಯಿ ಜೀರೆ, ಡಾ.ಗಿರೀಶ ಜೀರೆ, ಡಾ.ಉಮಾ ಜೀರೆ, ರಾಧಾಬಾಯಿ ಜೀರೆ, ಅನುರಾಧಾ ದೇಸಾಯಿ, ಸಹನಾ ತೈಲಂಗ್, ವಿನಾಯಕ ಜಗತಾಪ್, ವರ್ಷಾ ಜೀರೆ, ವಿನಾಯಕ ಜೀರೆ, ಲತಕ್ಕ ಕುಲಕರ್ಣಿ, ವಿನಾಯಕ ರಾಜಪುರೋಹಿತ ಮುಂತಾದವರಿದ್ದರು.

## 'ನನ್ನ ಶಾಲೆ-ನನ್ನ ಕೊಡುಗೆ' ಯಶಸ್ವಿಯಾಗಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಸರಕಾರಿ ಶಾಲೆಗಳ ಸಬಲೀಕರಣದಲ್ಲಿ ಸಮುದಾಯದ ಪಾತ್ರ ಪ್ರಮುಖವಾಗಿದ್ದು, ದಾನಿಗಳು 'ನನ್ನ ಶಾಲೆ-ನನ್ನ ಕೊಡುಗೆ' ಎಂಬುದನ್ನು ಆತ್ಮೀಯತೆಯಿಂದ ಸ್ವೀಕರಿಸಿ ಸರಕಾರಿ ಶಾಲೆಗಳತ್ತ ಬರಬೇಕೆಂದು ಸಂಪನ್ಮೂಲ ವ್ಯಕ್ತಿ ಕವಿತಾ ಬೇಲೇರಿ ಹೇಳಿದರು.

ಅವರು ಬುಧವಾರ ಗದುಗಿನ ಸಿದ್ಧರಾಮೇಶ್ವರ ನಗರದ ಸ.ಹಿ.ಪ್ರಾ.ಶಾ. ನಂ-6ರಲ್ಲಿ ಜರುಗಿದ 7ನೇ ವರ್ಗದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಸಂಜೀವಪ್ಪ ವಾಲೀಕಾರ ಸುಮಾರು 10 ಸಾವಿರ ರೂ. ಮೌಲ್ಯದ ಮೈಕ್‌ಸೆಟ್‌ನ್ನು ಹಾಗೂ ಶಾಲಾ ಗುರುಮಾತೆ ಜಿ.ಎಂ. ದೇವಗಿರಿ ಅವರು ಮಕ್ಕಳಿಗೆ ಕುಡಿಯುವ ನೀರಿನ ಬಾಟಲ್‌ಗಳನ್ನು ದೇಣಿಗೆ-ಯಾಗಿ ನೀಡಿದ್ದು, ಇದೇ ರೀತಿ ದಾನಿಗಳು ಸರಕಾರಿ ಶಾಲೆಯತ್ತ ಗಮನ ಹರಿಸಬೇಕೆಂದರು.

ಶಾಲಾ ಮುಖ್ಯೋಪಾಧ್ಯಾಯ ಎಂ.ಎಂ. ಜೋಗಿನ ಮಾತನಾಡಿ, ಹಿಂದುಳಿದ ಪ್ರದೇಶದ ಮಕ್ಕಳು ಪ್ರತಿಭಾನ್ವಿತರಾಗಿದ್ದು ಕಲಿಕೆಯಲ್ಲಿ ಆಸಕ್ತಿ ತೋರಿ ಉತ್ತಮ ಫಲಿತಾಂಶ ಹೊಂದುತ್ತಾರೆ. ಶಾಲೆಗಳ ಅಗತ್ಯಗಳಿಗೆ ದಾನಿಗಳ ಸಹಕಾರ ಅವಶ್ಯವೆಂದರು.

ವಿದ್ಯಾರ್ಥಿನಿಂ೨ರ೨ ಮಹಿಳಾ ಸುರಕ್ಷತೆಗಾಗಿ ಇರುವ ಯೋಜನೆಯೊಂದನ್ನು ಪ್ರೊಜೆಕ್ಟರ್ ಮೂಲಕ ಪ್ರಸ್ತುತಪಡಿಸಿದರು. ಸಿಆರ್‌ಪಿ ರೇಶ್ಮಾ ಬೆಣಗಿ ಸ್ವಾಗತಿಸಿದರು. ಎಂ.ಎ. ಕಂದಗಲ್ಲ ನಿರೂಪಿಸಿದರು. ಎಸ್. ಆರ್. ಕಲ್ಯಾಣ್ಕರ್ ಪರಿಚಯಿಸಿದರು ಜಿ.ಎಂ. ದೇವಗಿರಿ ವಂದಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿಗಳು, ಪಾಲಕ-ಪೋಷಕರು ಪಾಲ್ಗೊಂಡಿದ್ದರು.




## ಪಶು-ಪಕ್ಷಿ ಸಂಕುಲವನ್ನು ಸಂರಕ್ಷಿಸಿ




■ ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ಕಾಡಿನಲ್ಲಿ ಲಕ್ಷಾಂತರ ಜೀವರಾಶಿಗಳು ವಾಸಿಸುತ್ತಿದ್ದು, ಅವುಗಳ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಬೇಸಿಗೆಯಲ್ಲಿ ಕಾಡಿನ ಪ್ರಾಣಿ-ಪಕ್ಷಿಗಳು ನೀರನ್ನು ಅರಸಿ ಹೊಲ-ಗದ್ದೆಗಳು, ಜಲಮೂಲಗಳ ಬಳಿ ಬರುತ್ತವೆ. ಸಾರ್ವಜನಿಕರು ಅವುಗಳಿಗೆ ತೆ-ೂಂದರೆ ಕೊಡದೆ ಅವುಗಳ ರಕ್ಷಣೆ ಮಾಡಬೇಕು ಎಂದು ಚಿಗಟೇರಿ ಪ್ರಾದೇಶಿಕ ಅರಣ್ಯದ ಗಸ್ತು ಪಾಲಕರ ಸಾತವಾಡಿ ರಾಘವೇಂದ್ರ ತಿಳಿಸಿದರು.

ತಾಲೂಕಿನ ಕಣಿವಿಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹರಪನಹಳ್ಳಿ ಪ್ರಾದೇಶಿಕ ಅರಣ್ಯ ವಲಯದ ವತಿಯಿಂದ ಹಮ್ಮಿಕೊಂಡಿದ್ದ 'ಬೆಂಕಿ ಜಾಗೃತಿ ಕಾರ್ಯಕ್ರಮ'ದಲ್ಲಿ ಅವರು ಮಾತನಾಡಿದರು.

ಬೇಸಿಗೆಯಾದ ಕಾರಣ ಬೆಟ್ಟ-ಗುಡ್ಡಗಳಲ್ಲಿರವ ಹುಲ್ಲುಗಾವಲು ಪೂರ್ಣ ಒಣಗಿರುತ್ತದೆ. ಅವುಗಳಲ್ಲಿ ಅನೇಕ ಕ್ರಿಮಿ-ಕೀಟಗಳು, ಪ್ರಾಣಿ-ಪಕ್ಷಿಗಳು ಗೂಡುಗಳನ್ನು ಕಟ್ಟಿರುತ್ತವೆ. ಕಾಡಿಗೆ ಬೆಂಕಿ ಹಚ್ಚುವುದು ಕಾನೂನು ಬಾಹಿರವಾಗಿದ್ದು, ಅನಧಿಕೃತವಾಗಿ ಕಾಡನ್ನು ಕಡಿಯುವುದು, ಕಾಡಿಗೆ ಬೆಂಕಿಯನ್ನು ಹಚ್ಚುವುದು ಕಂಡುಬಂದಲ್ಲಿ ಅಂತವರಿಗೆ 24ಸಿ(1) ಕಾನೂನಿನನ್ವಯ 1 ವರ್ಷದವರೆಗೆ ಸೆರೆವಾಸ ಹಾಗೂ 2 ಸಾವಿರ ರೂ.ಗಳವರೆಗೆ ಜುಲ್ಮಾನೆ ವಿಧಿಸಲಾಗುವದೆಂದರು.

ಶಿಕ್ಷಕ ಎಂ.ರಮೇಶ್ ಮಾತನಾಡಿ, ದೇಶದಲ್ಲಿ ಕೈಗಾರಿಕೋದ್ಯಮಗಳ ಹಾವಳಿಯಿಂದ ಕಾಡು ಬಹುತೇಕ ನಶಿಸುತ್ತಿದ್ದು, ಉಳಿದ ಕಾಡನ್ನು ರಕ್ಷಿಸಿ ಅದರಲ್ಲಿರುವ ಪ್ರಾಣಿ ಸಂಕುಲಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಶಿಕ್ಷಕರಾದ ವೀಣಾ ಸಿ, ಶಾಹೀನಾಭೀ ಗುತ್ತಿ, ಆರ್. ರಾಮ ನಾಯಕ್, ಮಲ್ಲಿಕಾರ್ಜುನ್.ಎ, ನಾಗರಾಜ.ವೈ, ಸವಿತಾ ರಶ್ಮಿ ಹಾಗೂ ಗ್ರಾಮದ ಪ್ರಮುಖರಾದ ಡಿ. ವೀರಣ್ಣ, ದೊಡ್ಡ ರಾಮಣ್ಣ, ಬಸವರಾಜ, ಪವನ್ ಕುಮಾರ್ ಹಾಗೂ ವಲಯ ಅರಣ್ಯ ಸಿಬ್ಬಂದಿಗಳು ಇದ್ದರು.

## ಸಂತ ಕವಿ ಸರ್ವಜ್ಞ ಜಯಂತಿ ಆಚರಣೆ



■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಸಂತ ಕವಿ ಸರ್ವಜ್ಞರ 504ನೇ ಜಯಂತಿಯನ್ನು ಇಲ್ಲಿಯ ಸರ್ವಜ್ಞ ವಿವಿದೋದ್ದೇಶಗಳ ಕ್ಷೇಮಾಭಿವೃದ್ಧಿ ಸಂಘದ ಆಶ್ರಯದಲ್ಲಿ ಸಡಗರ-ಸಂಭ್ರಮದಿಂದ ಆಚರಿಸಲಾಯಿತು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಸರ್ವಜ್ಞರ ಭಾವಚಿತ್ರ ಮೆರವಣಿಗೆಯೊಂದಿಗೆ ಮಹಿಳೆಯರ ಪೂರ್ಣ ಕುಂಭೋತ್ಸವವು ಮಹಾಂತೇಶ್ವರ ಭಜನಾ ಸಂಘದ ಜಾನಪದ, ತತ್ವ ಪದಗಳ ಭಜನೆಯೊಂದಿಗೆ ಗಮನ ಸೆಳೆಯಿತು. ಕಲಾವಿದರಾದ ಮಹಾಲಿಂಗಪ್ಪ ಕುಂಬಾರ, ರಾಜು ಕುಂಬಾರ, ಶಿವು ಭಜಂತ್ರಿ, ಷಡಕ್ಷರಯ್ಯ ಬದ್ನಿಮಠ, ಬಸವರಾಜ ಹಡಗಲಿ, ಶಿವು ಟೆಂಗಿನಕಾಯಿ ಅವರು ವಿವಿಧ ಶರಣರ ಜಾನಪದ, ತತ್ವಪದ, ಭಕ್ತಿ ಪದಗಳನ್ನು ಹಾಡಿ ಗಮನ ಸೆಳೆದರು. ಮೆರವಣಿಗೆಗೆ ಗ್ರಾ.ಪಂ ಅಧ್ಯಕ್ಷ ಕೆ.ಎಸ್. ಪೂಜಾರ, ಉಪಾಧ್ಯಕ್ಷೆ ಪುಷ್ಪಾ ಪಾಟೀಲ ಚಾಲನೆ ನೀಡಿದರು.

ಸರ್ವಜ್ಞ ಜಯಂತಿ ಅಂಗವಾಗಿ ಗ್ರಾಮದ ಪ್ರಾಥಮಿಕ, ಪ್ರೌಢಶಾಲೆ, ಹಾಗೂ ಕಾಲೇಜ್‌ನ 50 ಬಡ ವಿದ್ಯಾರ್ಥಿಗಳಿಗೆ ಸ್ಕೂಲ್ ಬ್ಯಾಗ್ ವಿತರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾ.ಪಂ ಅಧ್ಯಕ್ಷ ಕೆ.ಎಸ್. ಪೂಜಾರ, ಉಪಾಧ್ಯಕ್ಷೆ ಪುಷ್ಪಾ ಪಾಟೀಲ ಅವರನ್ನು ಸನ್ಮಾನಿಸಲಾಯಿತು. ಮಾಜಿ ಯೋಧ ದತ್ತಾತ್ರೇಯ ಜೋಶಿ ಮಾತನಾಡಿದರು.

ಕುಂಬಾರ ಸಮಾಜದ ಹಿರಿಯರಾದ ಈಶ್ವರಪ್ಪ ಕುಂಬಾರ ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ ಸದಸ್ಯರಾದ ರುದ್ರಪ್ಪ ಮುಸ್ಕಿನಭಾವಿ, ವೀರಣ್ಣ ಚಕ್ರಸಾಲಿ, ಪೀರಸಾಬ ನದಾಫ, ಮಹಾಂತೇಶ ಕಮತರ, ಲಲಿತಾ ಗದಗಿನ, ರೇವಣಸಿದ್ದಪ್ಪ ಮುಳಗುಂದ, ಮಂಜುಳಾ ಮೆಣಸಿನಕಾಯಿ, ವಿರುಪಾಕ್ಷಪ್ಪ ಬೆಟಗೇರಿ, ನಿವೃತ್ತ ಉಪನ್ಯಾಸಕ ಶಿವಾನಂದ ಚಕ್ರಸಾಲಿ ಉಪಸ್ಥಿತರಿದ್ದರು.

ರಜೆ, ಕರ್ತವ್ಯ ಗೈರಿಗೆ ಪೂರ್ವಾನುಮತಿ ಕಡ್ಡಾಯ | ಧಾರವಾಡ ಜಿಲ್ಲಾ ಚುನಾವಣಾಧಿಕಾರಿ ದಿವ್ಯ ಪ್ರಭು

# ನಿಯಮ ಮೀರಿದರೆ ಶಿಸ್ತು ಕ್ರಮ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಲೋಕಸಭೆ ಸಾರ್ವತ್ರಿಕ ಚುನಾವಣೆ-2024ಕ್ಕೆ ಸಂಬಂಧಿಸಿದಂತೆ ಜಿಲ್ಲಾಡಳಿತವು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದು, ಈಗಾಗಲೇ ಚುನಾವಣಾ ಕರ್ತವ್ಯ ನಿರ್ವಹಣೆಗೆ ನೋಡಲ್ ಅಧಿಕಾರಿ, ಅಧಿಕಾರಿಗಳನ್ನು, ಸಿಬ್ಬಂದಿಗಳನ್ನು ನಿಯೋಜಿಸಿ, ಆದೇಶಿಸಲಾಗಿದೆ. ಯಾವುದೇ ಅಧಿಕಾರಿ, ಸಿಬ್ಬಂದಿಗಳು ಜಿಲ್ಲಾ ಚುನಾವಣಾಧಿಕಾರಿಗಳ ಪೂರ್ವಾನುಮತಿ ಇಲ್ಲದೆ ರಜೆ ಅಥವಾ ಗೈರು ಹಾಜರಾಗಬಾರದು. ಅನುಮತಿ ಪಡೆಯದೆ ಗೈರಾದಲ್ಲಿ ಗಂಭೀರವಾಗಿ ಪರಿಗಣಿಸಿ, ಅಂತವರನ್ನು ಜಿಲ್ಲೆಯಿಂದ ಬಿಡುಗಡೆ ಮಾಡಿ, ಮಾನ್ಯ ಭಾರತ ಚುನಾವಣಾ ಆಯೋಗಕ್ಕೆ ಶಿಸ್ತು ಕ್ರಮಕೈಗೊಳ್ಳಲು ಶಿಫಾರಸ್ಸು ಮಾಡಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಅವರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಾರ್ವತ್ರಿಕ ಲೋಕಸಭಾ ಚುನಾವಣೆ-2024 ಕಾರ್ಯಗಳಿಗೆ ನೂತನವಾಗಿ ನಿಯೋಜಿತರಾಗಿರುವ ನೋಡಲ್ ಅಧಿಕಾರಿಗಳ, ಚುನಾವಣಾ ಅಧಿಕಾರಿ, ಸಿಬ್ಬಂದಿಗಳ ಸಭೆ ಜರುಗಿಸಿ ಮಾತನಾಡಿದರು.



ಲೋಕಸಭೆಯ ಧಾರವಾಡ ಮತಕ್ಷೇತ್ರದ ಚುನಾವಣೆಯನ್ನು ಯಶಸ್ವಿಯಾಗಿ ಮತ್ತು ಪಾರದರ್ಶಕವಾಗಿ, ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಗಳಂತೆ ನಡೆಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಚುನಾವಣಾ ಸಂಬಂಧಿತ ಎಲ್ಲ ಕಾರ್ಯಗಳನ್ನು ಸುಗಮವಾಗಿ, ಕಾಲಮಿತಿಯಲ್ಲಿ ನಡೆಸಲು ವಿವಿಧ ವಿಭಾಗಗಳಿಗೆ ಜಿಲ್ಲೆಯ 21 ಜನ ಹಿರಿಯ ಅಧಿಕಾರಿಗಳನ್ನು ನೊಡಲ್ ಅಧಿಕಾರಿಗಳನ್ನಾಗಿ ನೇಮಿಸಿ ಆದೇಶಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ತಿಳಿಸಿದರು.

ನೊಡಲ್ ಅಧಿಕಾರಿಗೆ ತನ್ನ ಅಧೀನದಲ್ಲಿ ಕರ್ತವ್ಯ ನಿರ್ವಹಿಸಲು ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಅವರ ತಂಡದ ಸದಸ್ಯರನ್ನಾಗಿ ನೇಮಿಸಿದೆ. ಪ್ರತಿ ನೋಡಲ್ ಅಧಿಕಾರಿ ತನ್ನ ವಿಭಾಗದ ಕಾರ್ಯ ಮತ್ತು ಜವಾಬ್ದಾರಿಗಳ ಕುರಿತು ತರಬೇತಿ ನೀಡಿ, ತನ್ನ ತಂಡವನ್ನು ಸುಸಜ್ಜಿತಗೊಳಿಸುವುದು ಅವರ ಕರ್ತವ್ಯವಾಗಿದೆ. ಪ್ರತಿಯೊಬ್ಬ ಅಧಿಕಾರಿ ತನಗೆ ನಿಯೋಜಿಸಿದ ಚುನಾವಣಾ ಕಾರ್ಯಗಳ ಬಗ್ಗೆ, ಅದಕ್ಕೆ ಅನ್ವಯಿಸುವ ಸೆಕ್ಷನ್, ಕಾನೂನು, ಐಪಿಸಿ ತಿಳಿದಿರಬೇಕು. ತನ್ನ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಅರ್ಥೈಸಿಕೊಂಡು ಕರ್ತವ್ಯ ನಿರ್ವಹಿಸಬೇಕೆಂದು ಜಿಲ್ಲಾ ಚುನಾವಣಾಧಿಕಾರಿ ದಿವ್ಯ ಪ್ರಭು ಅವರು ತಿಳಿಸಿದರು.

ಅಧಿಕಾರಿಗಳಿಗೆ ನಿಯಮಾನುಸಾರ ಮತ್ತು ಅಧಿಕಾರಯುತವಾಗಿ ಚುನಾವಣಾ ಕಾರ್ಯಗಳನ್ನು ನಿರ್ವಹಿಸಲು ದಂಡಾಧಿಕಾರಿ ಅಧಿಕಾರ ಕೊಟ್ಟರೂ, ಅವರು ಸರಿಯಾಗಿ ಕೆಲಸ ಮಾಡದಿದ್ದರೆ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

> ಚುನಾವಣಾ ಸಹಾಯವಾಣಿ, ಕಂಟ್ರೋಲ್ ರೂಂ ಸರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಯಾವುದೇ ಚುನಾವಣಾ ಸಿಬ್ಬಂದಿ ಪೂರ್ವಾನುಮತಿ ಪಡೆಯದೇ ರಜೆ ಹೋಗುವುದಾಗಲಿ ಅಥವಾ ಗೈರು ಹಾಜರಾಗುವುದಾಗಲಿ ಮಾಡುವಂತಿಲ್ಲ. ಈ ಬಗ್ಗೆ ಆಯಾ ನೋಡಲ್ ಅಧಿಕಾರಿಗಳು ನಿಗಾವಹಿಸಬೇಕು. ಕರ್ತವ್ಯದಲ್ಲಿ ಉದಾಸೀನತೆ ತೋರುವ, ನಿಯಮ ಮೀರುವ ಸಿಬ್ಬಂದಿ, ಅಧಿಕಾರಿಗಳಿಗೆ ಆಯಾ ನೋಡಲ್ ಅಧಿಕಾರಿಗಳು ನೋಟಿಸ್ ನೀಡಿ, ಅವರ ಮೇಲೆ ಕ್ರಮ ಕೈಗೊಳ್ಳಲು ತಮ್ಮ ವರದಿಯೊಂದಿಗೆ ಶಿಸ್ತುಕ್ರಮಕ್ಕಾಗಿ ಜಿಲ್ಲಾ ಚುನಾವಣಾ ಆಯೋಗಕ್ಕೆ ಶಿಪಾರಸ್ಸು ಮಾಡಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಸ್ವಾಗತಿಸಿ, ಸಭೆ ನಿರ್ವಹಿಸಿದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ.ಗೋಪಾಲ ಬ್ಯಾಕೋಡ, ಉಪ ಪೊಲೀಸ್ ಆಯುಕ್ತ ರಾಜೀವ ಎಂ. ಮಾತನಾಡಿದರು. ಎಲ್ಲ ನೋಡಲ್ ಅಧಿಕಾರಿಗಳು, ಜಿಲ್ಲಾಧಿಕಾರಿಗಳ ಕಚೇರಿ ಚುನಾವಣಾ ತಹಸೀಲ್ದಾರ, ಶಿರಸ್ತೆದಾರರು, ವಿಷಯ ನಿರ್ವಾಹಕರು ಸಭೆಯಲ್ಲಿ ಭಾಗವಹಿಸಿದ್ದರು.

## ತೋಂಟದಾರ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿಶ್ವ ಚಿಂತನಾ ದಿನಾಚರಣೆ




■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ತೋಂಟ-ದಾರ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು, 'ವಿಶ್ವ ಚಿಂತನಾ ದಿನ' ಆಚರಿಸಿದರು.


ಪ್ರಾಚಾರ್ಯ ಡಾ. ಎಂ.ಎಂ. ಅವಟಿ ಪ್ರತಿ ವರ್ಷ ಫೆ.22ರಂದು ಆಚರಿಸಲಾಗುವ ವಿಶ್ವ ಚಿಂತನಾ ದಿನದ ಮಹತ್ವವನ್ನು ತಿಳಿಸುತ್ತಾ, ಇಂದು ಜಗತ್ತು ಎದುರಿಸುತ್ತಿರುವ ಸವಾಲುಗಳಾದ ಹವಾಮಾನ ಬದಲಾವಣೆ, ಸುಸ್ಥಿರ ಅಭಿವೃದ್ಧಿ, ಲಿಂಗ ಸಮಾನತೆ ಬಗ್ಗೆ ವಿಮರ್ಶಾತ್ಮಕವಾಗಿ ಯೋಚಿಸಲು ವಿದ್ಯಾರ್ಥಿಗಳನ್ನು ಉತ್ತೇಜಿಸಿದರು.

ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಈರಣ್ಣ ಕೋರಚಗಾಂವ, ವಿದ್ಯಾರ್ಥಿ ಸಮೂಹದಲ್ಲಿ ಏಕತೆ, ತಿಳುವಳಿಕೆ ಮತ್ತು ಸಹಾನುಭೂತಿಯ ಮನೋಭಾವವನ್ನು ಬೆಳೆಸುವ ಈ ಕಾರ್ಯಕ್ರಮ ಯಶಸ್ವಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಪ್ರೊ. ಜಗದೀಶ ಶಿವನಗುತ್ತಿ, ಪ್ರೊ. ಸಂತೋಷಕುಮಾರ ಜಿ.ಎಮ್ ವಿದ್ಯಾರ್ಥಿಗಳಿಂದ 'ವಿಶ್ವ ಥಿಂಕಿಂಗ್ ಡೇ' ಆಚರಣೆಯ ಅಂಗವಾಗಿ ಜಾಥಾ ಏರ್ಪಡಿಸಿದ್ದರು. ಕಾರ್ಯಕ್ರಮದಲ್ಲಿ ಪ್ರೊ. ಗೌತಮ ರೇವಣಕರ, ಪ್ರೊ. ದಯಾನಂದ ಗೌಡರ, ಪ್ರೊ. ಲೋಕೇಶ, ಪ್ರೊ. ಅಶ್ವಿನಿ ಅರಳಿ, ಪ್ರೊ. ಮಧುಸೂಧನ ಕುಲಕರ್ಣಿ, ಪ್ರೊ. ಶೈಲಜಾ ಮುದೇನಗುಡಿ, ಪ್ರೊ. ಆರ್.ವಿ. ಕಡಿ, ಪ್ರೊ. ಎಸ್.ಎಸ್. ಕಂದಗಲ್ಲ, ಪ್ರೊ. ಮಲ್ಲಿಕಾರ್ಜುನ ಜಿ.ಡಿ., ಪ್ರೊ. ಪ್ರಸನ್ನ ನಾಡಗೌಡ, ಪ್ರೊ. ಸುನೀಲ ಪಾಟೀಲ, ಪ್ರೊ. ವೀರೇಶ ಮಾಗಳದ, ಪ್ರೊ. ವಿಜಯಕುಮಾರ ಮಾಲಗಿತ್ತಿ, ಪ್ರೊ. ಮಹಾಂತ ಕಟ್ಟಿಮನಿ, ಪ್ರೊ. ಮೃತ್ಯುಂಜಯ ಹೂಗಾರ, ಪ್ರೊ. ಶಶಿಧರಗೌಡ ಸೇರಿದಂತೆ ಶಿಕ್ಷಕರು ಪಾಲ್ಗೊಂಡಿದ್ದರು.

## ಜಾನೋಪಂತರ ಕ್ರಿಕೆಟ್ ಅಕಾಡೆಮಿಗೆ 4ನೇ ಜಯ

■ವಿಜಯಸಾಕ್ಷಿ ಸುದ್ದಿ, ಗದಗ



ಪ್ರಲ್ಹಾದ ಕುಲಕರ್ಣಿ, ಮಹಾಂತೇಶ ಹಾನಗಲ್ಲ ಹಾಗೂ ಆಕಾಶ ಕಟ್ಟಿಮನಿಯವರ ಅತ್ಯುತ್ತಮ ಬ್ಯಾಟಿಂಗ್ ಹಾಗೂ ಸಂತೋಷ ನವಲಗುಂದ, ಓಂಕಾರ ಕೇಸ್ತಿ ಮತ್ತು ವಿಶಾಲ ಕಬಾಡಿಯವರ ಅತ್ಯುತ್ತಮ ಬೌಲಿಂಗ್‌ನಿಂದಾಗಿ ನಗರದ ಜಾನೋಪಂತರ ಕ್ರಿಕೆಟ್ ಅಕಾಡೆಮಿ ತಂಡ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಧಾರವಾಡ ವಲಯ) ಆಶ್ರಯದ 2ನೇ ಡಿವಿಜನ್ ಲೀಗ್ ಟೂರ್ನಿಯಲ್ಲಿ 4ನೇ ಜಯ ಸಾಧಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಜಾನೋಪಂತರ ಕ್ರಿಕೆಟ್ ಅಕಾಡೆಮಿಯ ಪ್ರಹ್ಲಾದ ಕುಲಕರ್ಣಿ (54 ಎಸೆತಗಳಲ್ಲಿ 78 ರನ್) ಮಹಾಂತೇಶ ಹಾನಗಲ್ಲ (69 ರನ್), ಆಕಾಶ ಕಟ್ಟಿಮನಿ (52 ರನ್) ಹಾಗೂ ಅಭಿಷೇಕ ನಾಯ್ಕ ಬಾರಿಸಿದ 20 ರನ್‌ಗಳ ನೆರವಿನಿಂದಾಗಿ ನಿಗದಿತ 50 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 283 ರನ್ ಗಳಿಸಿತು. ಹುಬ್ಬಳ್ಳಿ ತಂಡದ ಪರ ಈರಪ್ಪ ಘಂಟಿ ಹಾಗೂ ಪ್ರವೀಣ ಕೋಟ್ಯಾಳ ತಲಾ 2 ವಿಕೆಟ್ ಪಡೆದರು.

ನಂತರ ಬ್ಯಾಟಿಂಗ್ ಮಾಡಿದ ಟ್ಯಾಲೆಂಟ್ ಸ್ಪೋರ್ಟ್ಸ್ ಕ್ಲಬ್‌ನವರು ಗದಗ ತಂಡದ ಬೌಲರ್‌ಗಳಾದ ಸಂತೋಷ ನವಲಗುಂದ (29ಕ್ಕೆ 3 ವಿಕೆಟ್), ವಿಶಾಲ ಕಬಾಡಿ (33ಕ್ಕೆ 2 ವಿಕೆಟ್) ಹಾಗೂ ಓಂಕಾರ ಕೇಸ್ತಿಯ (14ಕ್ಕೆ 3 ವಿಕೆಟ್) ಮಾರಕ ಬೌಲಿಂಗ್ ದಾಳಿಗೆ ಸಿಲುಕಿ 31ನೇ ಓವರಿನಲ್ಲಿ 108 ರನ್ ಗಳಿಸಿ ಆಲೌಟ್ ಆಯಿತು. ಈ ಜಯದಿಂದಾಗಿ ಗದಗ ತಂಡ 4 ಅಂಕ ಸಂಪಾದಿಸಿತು.

## ವಿದ್ಯಾರ್ಥಿಗಳಿಗೆ ಕಲಿಕಾ ಮೇಳ ಸಹಕಾರಿ



■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ಕಲಿಕಾ ಮೇಳದಿಂದ ಮಕ್ಕಳಲ್ಲಿ ಅಡಗಿರುವ ಸುಪ್ತ ಶಕ್ತಿಯನ್ನು ಹೊರತರಲು ಸಹಾಯವಾಗುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಯು.ಬಸವರಾಜಪ್ಪ ಹೇಳಿದರು.

ತಾಲೂಕಿನ ಮತ್ತಿಹಳ್ಳಿ ಗ್ರಾಮದಲ್ಲಿ ಶಾಲಾ ಶಿಕ್ಷಣ ಇಲಾಖೆ, ಹೊಸಪೇಟೆ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಜಿಲ್ಲಾ ಸಂಸ್ಥೆ ಬಳ್ಳಾರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಹರಪನಹಳ್ಳಿ ಸಮೂಹ ಸಂಪನ್ಮೂಲ ಕೇಂದ್ರ ಮತ್ತಿಹಳ್ಳಿ, ಗ್ರಾ.ಪಂ ಮತ್ತಿಹಳ್ಳಿ ಇವರ ಸಹಯೋಗದಲ್ಲಿ ಮತ್ತಿಹಳ್ಳಿ ಕ್ಲಸ್ಟರ್ ಮಟ್ಟದ ಮಕ್ಕಳ ಎಫ್‌ಎಲ್‌ಎನ್ ಕಲಿಕಾ ಮೇಳದಲ್ಲಿ ಅವರು ಮಾತನಾಡಿದರು.

ಸಿಆರ್‌ಪಿ ಎಲ್.ಹೆಚ್. ಗಿರಿರಾಜ್ ಮಾತನಾಡಿ, ಒಂದು ಮಗು ಪ್ರತ್ಯಕ್ಷವಾಗಿ ಮಾಡಿ ಕಲಿತಿರುವುದಕ್ಕಿಂತ ಮೇಳದಲ್ಲಿ ನೋಡಿ ಕಲಿಯುವುದು ಬಹಳ ಇದೆ ಹಾಗೂ ಇಂತಹ ಮೇಳಗಳು ಗ್ರಾಮೀಣ ಭಾಗದ ಮಕ್ಕಳಿಗೆ ಅವಶ್ಯಕವಾಗಿದೆ ಎಂದರು.

ಹರಪನಹಳ್ಳಿ ತಾಲೂಕು ಸ.ಮಾ ಹಿರಿಯ ಪ್ರಾಥಮಿಕ ಶಾಲೆ ಮತ್ತಿಹಳ್ಳಿ ಕ್ಲಸ್ಟರ್ ಹಂತದ ಕಲಿಕಾ ಮೇಳ ಕಾರ್ಯಕ್ರಮವನ್ನು ಮತ್ತಿಹಳ್ಳಿ ಗ್ರಾ.ಪಂ ಅಧ್ಯಕ್ಷ ಸಣ್ಣ ಹೊನ್ನಪ್ಪನವರು ಉದ್ಘಾಟಿಸಿದರು. ಕ್ಲಸ್ಟರ್‌ನ ಎಲ್ಲಾ ಶಾಲೆಯ ಮಕ್ಕಳು ವಿವಿಧ ಮಾದರಿಗಳೊಂದಿಗೆ ಆಗಮಿಸಿ ಸ್ವತಃ ವಿವರಿಸಿದರು.

ಕಾರ್ಯಕ್ರಮದಲ್ಲಿ ಬಿಆರ್‌ಸಿ ಹೊನ್ನೇತ್ತಪ್ಪ, ವಾಗೀಶ್, ಅಣ್ಣಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಮಂಜಣ್ಣ, ಪಿಡಿಓ ಹಾಲಪ್ಪ, ಸಂಪನ್ಮೂಲ ವ್ಯಕ್ತಿ ರಮೇಶ್, ಸುಜಾತ, ವೀರೇಂದ್ರ, ಮುಖ್ಯ ಗುರುಗಳಾದ ಹನುಮಂತಪ್ಪ, ಕೊಟ್ರೇಶ್ ಇತರರರು ಹಾಜರಿದ್ದರು.

## ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆಯ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುವ ಸಮಾರಂಭ ಏರ್ಪಡಿಸಲಾಗಿತ್ತು. ಇದರ ಅಂಗವಾಗಿ ಶಾಲೆಯ ಪ್ರಾಥಮಿಕ ಹಾಗೂ ಪ್ರೌಢ ವಿಭಾಗದ ವಿದ್ಯಾರ್ಥಿಗಳಿಂದ ವಿವಿಧ ಕಾರ್ಯಕ್ರಮಗಳು ನಡೆದವು.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಎಸ್. ಎಸ್. ಕುಲಕರ್ಣಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗದಗ ಶಹರ ವಲಯದ ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಜೆ.ಎಂ. ಜಗದೀಶ್, ಶಹರ ವಲಯದ ಸಿಆರ್‌ಸಿ ರವಿ ಹೆಬ್ಬಳ್ಳಿ ಪಾಲ್ಗೊಂಡಿದ್ದರು. ವಿಶೇಷ ಅತಿಥಿಗಳಾಗಿ ಪತ್ರಕರ್ತ, ವಿವಿಧ ಸಮೂಹಗಳ ರಾಜ್ಯ ಅಧ್ಯಕ್ಷ ರಾ.ದೇ. ಕಾರಭಾರಿ, ಮೇರಿ ರಾ.ದೇ. ಕಾರಭಾರಿ, ಮಾರುತಿ ಬಿ.ಸಿ ಉಪಸ್ಥಿತರಿದ್ದರು.

ಶಿಕ್ಷಕ ಆರ್.ಎಂ. ಜಾಗನೂರ್, ಜಿ.ಬಿ. ದೊಡ್ಡಮನಿ, ಎಚ್.ಆರ್. ಪಾಟೀಲ್, ಟಿ.ಆರ್. ಬೇವಿನ್ಮರದ, ಇ.ಜೇ. ಗೋಕಾವಿ, ಎಸ್. ಎನ್. ದೊಡ್ಡವಾಡ, ಎನ್.ಎಂ. ಕೆಲಗೇರಿ, ಮಾಳೆಕೊಪ್ಪಮಟ್, ಮುಂತಾದವರಿದ್ದರು.

## ಶ್ರೀ ವಿದ್ಯಾಸಾಗರ ಮಹಾರಾಜರಿಗೆ ವಿನಯಾಂಜಲಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಛತ್ತೀಸಗಢ ರಾಜ್ಯದ ಚಂದ್ರಗಿರಿತೀರ್ಥ ಡೊಂಗರಗಢದಲ್ಲಿ ಆಚಾರ್ಯಶ್ರೀ ವಿದ್ಯಾಸಾಗರ ಮುನಿಮಹಾರಾಜರು ಸಮಾಧಿಮರಣ ಹೊಂದಿದ ನಿಮಿತ್ಯ ಪಟ್ಟಣದ ಶಂಖ ಬಸದಿಯಲ್ಲಿ ಶ್ರಾವಕ, ಶ್ರಾವಕಿಯರು ಸಭೆ ಸೇರಿ ವಿನಯಾಂಜಲಿ ಅರ್ಪಿಸಿದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರು ಮಾತನಾಡಿ, ಮಹಾರಾಜರು ಇತ್ತಿಚೆಗಷ್ಟೇ ಯಮಸಲ್ಲೇಖನ ವ್ರತ ಕೈಗೊಂಡಿದ್ದರು. ಆಚಾರ್ಯಶ್ರೀ ವಿದ್ಯಾಸಾಗರ ಮಹಾರಾಜರ ಬಾಲ್ಯದಿಂದಲೇ ಅಲೌಕಿಕ ರಂಗದತ್ತ ತಮ್ಮ ಚಿತ್ತವನ್ನು ಹರಿಸಿದ್ದರು. ಆಧ್ಯಾತ್ಮ ಜೀವಿಗಳಾಗಿದ್ದ ವಿದ್ಯಾಧರರು, ಆಚಾರ್ಯ ದೇಶಭೂಷಣ ಮಹಾರಾಜರಿಂದ ಬ್ರಹ್ಮಚರ್ಯ ದೀಕ್ಷೆಯನ್ನು ಸ್ವೀಕಾರ ಮಾಡಿದ್ದರು. ಅವರ ಅಗಲಿಕೆಯು ನೋವು ಕೋಟ್ಯಾಂತರ ಭಕ್ತರಿಗೆ ಅಪಾರ ಶೋಕವನ್ನುಂಟು ಮಾಡಿ ಅನಾಥರನ್ನಾಗಿಸಿದೆ ಎಂದರು.


ಸಮಾಧಿಸ್ತರಾದ ಆಚಾರ್ಯ ವಿದ್ಯಾಸಾಗರ ಮಹಾರಾಜರಿಗೆ, ಲಕ್ಷ್ಮೇಶ್ವರದ ಬಸ್ತಿಬಣದ ಶ್ರಾವಕ ಶ್ರಾವಕಿಯರೆಲ್ಲ ಶ್ರೀ ನೇಮಿನಾಥ ಶಂಖ ಬಸದಿ ಆವರಣದಲ್ಲಿ ಸಭೆ ಸೇರಿ, ತುಪ್ಪದ ದೀಪ ಬೆಳಗಿ ವಿನಯಾಂಜಲಿಯನ್ನು ಸಲ್ಲಿಸಿದರು. ಶ್ರಾವಕರಾದ ಧನ್ಯಕುಮಾರ ಮುತ್ತಿನ, ನಂದಕುಮಾರ ಪಾಟೀಲ, ಭೂಪಾಲ ಘೊಂಗಡಿ, ಡಾ.ಆನಂದ ಪಾಟೀಲ, ವಿನಯ ಪಾಟೀಲ, ನೇಮಿನಾಥ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

## ನೂತನ ರಥ ಲೋಕಾರ್ಪಣೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಬನಶಂಕರಿ ಬಡಾವಣೆಯಲ್ಲಿರುವ ಐತಿಹಾಸಿಕ ಬನಶಂಕರಿ ದೇವಸ್ಥಾನ ಕಳೆದ 5 ವರ್ಷಗಳ ಹಿಂದೆ ಜೀರ್ಣೋದ್ಧಾರಗೊಂಡಿದ್ದು, ಐದನೆ ವರ್ಷದ ಅಂಗವಾಗಿ ಪ್ರಥಮ ಬಾರಿಗೆ ಜಾತ್ರೆ ಹಮ್ಮಿಕೊಳ್ಳಲಾಗಿದೆ.

ನಾರಾಯಣಪ್ಪ ಬೇವಿನಮರದ ಅವರ ನೇತೃತ್ವದಲ್ಲಿ ದೇವಾಂಗ ಸಮಾಜದ ಹಿರಿಯರು ಹಾಗೂ ವಿವಿಧ ಸಮಾಜದ ಭಕ್ತರ ಸಹಾಯದಿಂದ ಸುಮಾರು 75 ಲಕ್ಷ ರೂ ವೆಚ್ಚದಲ್ಲಿ ದೇವಸ್ಥಾನ ಜೀರ್ಣೋದ್ಧಾರಗೊಂಡು 2019ರಲ್ಲಿ ಲೋಕಾರ್ಪಣೆಗೊಂಡಿತು. ಇದೀಗ ಸುಮಾರು 7 ಲಕ್ಷ ರೂ ವೆಚ್ಚದಲ್ಲಿ ಹೊಸದಾಗಿ ರಥ ನಿರ್ಮಾಣಗೊಂಡಿದ್ದು, ಕುಂದಗೋಳ ತಾಲೂಕ ಮಳಲಿ ಗ್ರಾಮದ ಮುರಳೀಧರ ಬಡಿಗೇರ ರಥ ನಿರ್ಮಾಣ ಮಾಡಿದ್ದಾರೆ. ನೂತನವಾಗಿ ನಿರ್ಮಿಸಲ್ಪಟ್ಟ ರಥದ ಕಳಸಾರೋಹಣ ಹಾಗೂ ರಥೋತ್ಸವ ಕಾರ್ಯಕ್ರಮ ನಡೆಯಲಿದೆ.



ಫೆ.22ರಂದು ಕಳಸಾರೋಹಣ ನೆರವೇರಿದ್ದು, ಫೆ.23ರಂದು ಮುಂಜಾನೆ 9.30ರಿಂದ ಹೋಮ ಹವನ, ಪೂಜಾ ಕೈಂಕರ್ಯಗಳು, ಫೆ.24ರಂದು ಭಾರತ ಹುಣ್ಣಿಮೆ ದಿವಸ ಮುಂಜಾನೆ ಶ್ರೀ ದೇವಿಗೆ ಅಭಿಷೇಕ, ವಿಶೇಷ ಅಲಂಕಾರ, ಮಂಜುನಾಥ ಬೇವಿನಮರದ ದಂಪತಿಗಳಿಂದ 1008 ಮಹಿಳೆಯರಿಗೆ ಉಡಿ ತುಂಬುವುದು, ಮದ್ಯಾಹ್ನ 12 ಗಂಟೆಯಿಂದ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ನಡೆಯಲಿದೆ. ಸಂಜೆ 5ಗಂಟೆಗೆ ನೂತನವಾಗಿ ನಿರ್ಮಾಣಗೊಂಡಿರುವ ರಥೋತ್ಸವ ಜರುಗಲಿದ್ದು, ಸಂಜೆ 6 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದೆ.

ರಥೋತ್ಸವದ ದಿವ್ಯ ಸಾನ್ನಿಧ್ಯವನ್ನು ಹೂವಿನಶಿಗ್ಲಿ ವೀರಕ್ತಮಠದ ಮ.ನಿ.ಪ್ರ ಚನ್ನವೀರ ಮಹಾಸ್ವಾಮಿಗಳು ವಹಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾಬಳೇಶ್ವರಪ್ಪ ಬೇವಿನಮರದ, ಅತಿಥಿಗಳಾಗಿ ಶಿರಹಟ್ಟಿ ಮತಕ್ಷೇತ್ರದ ಶಾಸಕ ಡಾ. ಚಂದ್ರು ಲಮಾಣಿ, ಮಾಜಿ ಶಾಸಕ ಜಿ.ಎಂ. ಮಹಾಂತಶೆಟ್ಟರ, ಜಿ.ಎಸ್. ಗಡ್ಡದೇವರಮಠ, ಬನಶಂಕರಿ ಸೇವಾ ಸಮಿತಿ ಅಧ್ಯಕ್ಷ ನಾರಾಯಣಪ್ಪ ಗಾರ್ಗಿ, ಲಕ್ಷ್ಮಣ ಮೆಡ್ಲೇರಿ ಪಾಲ್ಗೊಳ್ಳಲಿದ್ದಾರೆ.

ಫೆ.25ರಂದು ಸಂಜೆ 5ಕ್ಕೆ ಕಡುಬಿನಕಾಳಗ ನಡೆಯಲಿದೆ ಎಂದು ತಿಳಿಸಲಾಗಿದೆ.

## ಗುರುವಿನಿಂದಲೇ ಮೋಕ್ಷ



■ವಿಜಯಸಾಕ್ಷಿ ಸುದ್ದಿ, ಗದಗ

ಗುರುವಿನಿಂದಲೇ ಸರ್ವಸಿದ್ಧಿ, ಗುರುವೇ ಎಲ್ಲದಕ್ಕೂ ಮೂಲ ಕಾರಣ. ದೇವರಿಗಿಂತ ಗುರುವೇ ದೊಡ್ಡವರು. ಗುರುವಿನಿಂದಲೇ ಮೋಕ್ಷ ಎಂದು ಅಣ್ಣಿಗೇರಿಯ ರುದ್ರಮುನೇಶ್ವರ ದಾಸೋಹ ಮಠದ ಪರಮಪೂಜ್ಯ ಶಿವಕುಮಾರ ಮಹಾಸ್ವಾಮಿಗಳು ನುಡಿದರು.

ಅವರು ತಾಲೂಕಿನ ಚಿಕ್ಕಹಂದಿಗೋಳ ಗ್ರಾಮದಲ್ಲಿ 15 ದಿವಸಗಳಿಂದ ನಡೆದ ಕನ್ನಡದ ಕಬೀರ ಸಂತ ಶಿಶುನಾಳ ಶರೀಫ ಶಿವಯೋಗಿಗಳ ಪುರಾಣ ಪ್ರವಚನ ಮಹಾಮಂಗಳ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಪುರಾಣ ಪ್ರವಚನಕಾರರಾದ ಸಿದ್ದರಾಮಯ್ಯ ಶಾಸ್ತ್ರೀಗಳು ತೆಕ್ಕಲಕೋಟೆ ಸಂಗೀತ ಬಳಗ, ಮಹಾರುದ್ರಪ್ಪ ಪತ್ತಾರ ಮತ್ತು ಹನುಮಂತ ರಜಲಬಂಡಿ, ಶಿವನಗೌಡ ರು.ಗೌಡರ, ನಾಗಪ್ಪ ವೀ.ಕಿತ್ತೂರ, ಅಂದನಗೌಡ ಶಾ.ಗೌಡರ, ಸೋಮಶೇಖರಪ್ಪ ಅಣ್ಣಿಗೇರಿ, ಗೋವಿಂದರೆಡ್ಡಿ ಹೆಬಸೂರ, ವಿರೂಪಾಕ್ಷಯ್ಯ ತಾಳಿಕೋಟಿಮಠ, ತುಳಸಪ್ಪ ರೋಣದ, ದೇವಪ್ಪ ದ್ಯಾವನಸಿ, ಹನುಮಪ್ಪ ದುಂದೂರು, ದಾದಾಪೀರ್ ಅಣ್ಣಿಗೇರಿ, ಬಸನಗೌಡ ನಾಗನಗೌಡ ಗೌಡರ ಮುಂತಾದವರು ಉಪಸ್ಥಿತರಿದ್ದರು.

## ಎಸ್‌ಡಿಪಿಐ ಪಕ್ಷವನ್ನು ಸಂಘಟಿಸಿ ಗೆಲ್ಲಿಸೋಣ

■ವಿಜಯಸಾಕ್ಷಿ ಸುದ್ದಿ, ಗದಗ

ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಗದಗ ವಿಧಾನಸಭಾ ಕ್ಷೇತ್ರ ಸಮಿತಿಯ ವತಿಯಿಂದ ಫೆ.22ರಂದು ಝಾಕೀರ್ ಹುಸೇನ್ ಕಾಲೋನಿ ಶಾದಿಹಾಲ್ ಮುಳಗುಂದ ನಾಕಾದಲ್ಲಿ ಪಕ್ಷ ಸೇರ್ಪಡೆ ಹಾಗೂ ಪಕ್ಷದ ಕಾರ್ಯಕರ್ತರು, ಹಿತೈಷಿಗಳು ಮತ್ತು ಬೆಂಬಲಿಗರ ಸಮಾವೇಶ ನಡೆಯಿತು.




ಮುಖ್ಯ ಅತಿಥಿಗಳಾಗಿ ಎಸ್‌ಡಿಪಿಐ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಆರ್. ಭಾಸ್ಕರ್ ಪ್ರಸಾದ್ ಭಾಗವಹಿಸಿ ಪಸಕ್ತ ರಾಜಕೀಯ ಪಕ್ಷಗಳ ತಾರತಮ್ಯ ಕುರಿತು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಸಮಿತಿ ಸದಸ್ಯರು ಹಾಗೂ ಗದಗ ಜಿಲ್ಲಾ ಪಕ್ಷದ ಉಸ್ತುವಾರಿ ರಮಜಾನ ಕಡಿವಾಲ ಮಾತನಾಡಿ, ಪಕ್ಷವು ಮುಂದಿನ ದಿನಗಳಲ್ಲಿ ಗದಗ ಜಿಲ್ಲೆಯಲ್ಲಿ ಎಸ್‌ಡಿಪಿಐ ಪಕ್ಷದ ಶಾಸಕರನ್ನು ಗೆಲ್ಲಿಸಲು ಎಲ್ಲರೂ ಪಣತೊಡಬೇಕು ಎಂದು ಹೇಳಿದರು.

ಗದಗ ಜಿಲ್ಲಾಧ್ಯಕ್ಷ ಬಿಲಾಲ್ ಗೋಕಾವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಗದಗ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಯಾಸಿನ್ ಹುಬ್ಬಳ್ಳಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಉಪಾಧ್ಯಕ್ಷ ಹಿದಾಯತುಲ್ಲಾ ಕಾಗದಗಾರ, ಸದಸ್ಯರಾದ ಇಬ್ರಾಹಿಂ ಕಿಲ್ಲೆದಾರ, ಮುಜಾಹಿದ್ ಕಣಕೆಣ್ಣವರ್, ಇರ್ಫಾನ್ ಗುಳಗುಂದಿ, ಅನ್ವರ್ ಮುಲ್ಲಾ, ಮುಸ್ತಾಕ್ ಕಟ್ಟಿಮನಿ ನವೀದ್ ಕಮಾನಗಾರ್, ಸಮೀರ್ ಕೊಟ್ಟರ, ಹಸನ್ ನಾಗನೂರ್, ಖಲೀಲ್ ನಾರಾಯಣಕೆರಿ, ಸದ್ದಾಂ ಚಾಕಲಬ್ಬಿ ಮುಂತಾದವರು ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ಅನ್ವರ್ ಬಾಗೇವಾಡಿ ಸ್ವಾಗತಿಸಿದರು.

## ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ

■ವಿಜಯಸಾಕ್ಷಿ ಸುದ್ದಿ, ಗದಗ



ಇಲ್ಲಿನ ತಾಲೂಕು ಕಚೇರಿಯಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಜೈ ಹೋ ಕರ್ನಾಟಕ ಪರಿವರ್ತನಾ ವೇದಿಕೆ ವಿನಂತಿಸಿದೆ.

ಈ ಬಗ್ಗೆ ವೇದಿಕೆಯ ಗದಗ ಜಿಲ್ಲಾಧ್ಯಕ್ಷ ರಫೀಕ ಧಾರವಾಡ ಪತ್ರಿಕಾ ಹೇಳಿಕೆ ನೀಡಿ, ಈ ತಾಲೂಕು ಕಚೇರಿಗೆ ವಯೋವೃದ್ಧರು, ಮಹಿಳೆಯರು ಕೆಲಸಕ್ಕಾಗಿ ಬರುತ್ತಾರೆ. ಆದರೆ ಇಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ಅವರು ವಿನಂತಿಸಿದ್ದಾರೆ.

# ಗಾಂಜಾ ಮಾರಲೆತ್ನಿಸಿದ ಆರೋಪಿತನಿಗೆ ಶಿಕ್ಷೆ

■ವಿಜಯಸಾಕ್ಷಿ ಸುದ್ದಿ, ಗದಗ




ಸ್ವಂತ ಲಾಭದ ಉದ್ದೇಶದಿಂದ ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ಗಾಂಜಾವನ್ನು ತನ್ನ ಬಳಿ ಇಟ್ಟುಕೊಂಡಿದ್ದ ಆರೋಪಿತನಿಗೆ ನ್ಯಾಯಾಲಯವು ಶಿಕ್ಷೆ ವಿಧಿಸಿದೆ.

ಪ್ರಕರಣದ ಆರೋಪಿ ನಿಂಗಪ್ಪ ಭರಮಪ್ಪ ಮಡಿವಾಳರ ಇವನು 13–03–2017ರಂದು ಮುಂಜಾನೆ 9–15 ಗಂಟೆಗೆ ಗದಗ ಹುಡ್ಕೋ ಲಾಸ್ಟ್ ಕ್ರಾಸ್ ಹತ್ತಿರ ರಸ್ತೆ ಬದಿಯಲ್ಲಿ ತನ್ನ ಕೈಯಲ್ಲಿ ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 1 ಕೆಜಿ 60 ಗ್ರಾಂ. ಗಾಂಜಾವನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ತನ್ನ ವಶದಲ್ಲಿಟ್ಟುಕೊಂಡು ಸಿಕ್ಕ ಅಪರಾಧ ಕುರಿತು ಆರೋಪಿತನ ವಿರುದ್ಧ ಗದಗ ಶಹರ ವೃತ್ತದ ಸಿಪಿಐ ನಾಗರಾಜ ಎಂ.ಮಾಡಳ್ಳಿ ತನಿಖೆಯನ್ನು ಪೂರೈಸಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಸಾಕ್ಷಿ ವಿಚಾರಣೆ ನಡೆಸಿದ ಗದಗಿನ ಮಾನ್ಯ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ರಾಜೇಶ್ವರ ಎಸ್.ಶೆಟ್ಟಿ ಇವರು ಸದರ ಪ್ರಕರಣದಲ್ಲಿ ಆರೋಪ ರುಜುವಾತು ಆಗಿದ್ದರಿಂದ ಆರೋಪಿಯಾದ ನಿಂಗಪ್ಪ ಭರಮಪ್ಪ ಮಡಿವಾಳರ ಇವನಿಗೆ ಫೆ. 20ರಂದು ಕಲಂ 20(ಬಿ) ಎನ್‌ಡಿಪಿಎಸ್ ಕಾಯ್ದೆ ಅಡಿಯಲ್ಲಿ 3 ವರ್ಷ ಕಠಿಣ ಶಿಕ್ಷೆ ಹಾಗೂ 25 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿರುತ್ತಾರೆ. ಸದರಿ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾಗಿ ಮಲ್ಲಿಕಾರ್ಜುನಗೌಡ ಬಸವನಗೌಡ ದೊಡ್ಡಗೌಡ್ರ ಸಾಕ್ಷಿ ವಿಚಾರಣೆ ಮಾಡಿ, ವಾದ ಮಂಡಿಸಿದ್ದರು.

### 'ವಿಕಸಿತ ಭಾರತ ಸಂಕಲ್ಪ ಯಾತ್ರೆ'ಯ 2ನೇ ಹಂತದ ಕಾರ್ಯಕ್ರಮ ಉದ್ಘಾಟಿಸಿದ ಮೇಯರ್ ವೀಣಾ ಭಾರದ್ವಾಡ

# ಲಿಂಗರಾಜ ನಗರದಲ್ಲಿ ಜಾಗೃತಿ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಜನೋಪಯೋಗಿ ಯೋಜನೆಗಳನ್ನು ನಗರ ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ತಲುಪಿಸುವಲ್ಲಿ ನೆರವಾಗಿರುವ 'ವಿಕಸಿತ ಭಾರತ ಸಂಕಲ್ಪ ಯಾತ್ರೆ'ಯ ಎರಡನೇ ಹಂತದ ಕಾರ್ಯಕ್ರಮದ ಅಂಗವಾಗಿ ಗುರುವಾರ ಧಾರವಾಡ ಜಿಲ್ಲೆ ಹುಬ್ಬಳ್ಳಿಯ ಲಿಂಗರಾಜ ನಗರದಲ್ಲಿ ವಿಶೇಷ ಜಾಗೃತಿ ಕಾರ್ಯಕ್ರಮ ಜರಗಿತು.

ವೇದಿಕೆ ಕಾರ್ಯಕ್ರಮವನ್ನು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಮೇಯರ್ ವೀಣಾ ಭಾರದ್ವಾಡ ಮತ್ತು ಜಿಲ್ಲಾ ಪ್ರಭಾರ ಅಧಿಕಾರಿ ರಿಚಾ ಖೋಡಾ ದೀಪ ಬೆಳಗುವ ಮೂಲಕ ಚಾಲನೆಯನ್ನು ನೀಡಿದರು. ಈ ಸಂದರ್ಭದಲ್ಲಿ ಭಾರತವನ್ನು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಕುರಿತು ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು.



ಯೋಜನೆಗಳ ಮಾಹಿತಿಯುಳ್ಳ 2024ರ ಹೊಸ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳಾದ ಪ್ರಧಾನ ಮಂತ್ರಿ ಉಜ್ವಲ ಯೋಜನೆ, ಸ್ವ-ಸಹಾಯ ಗುಂಪುಗಳಿಗೆ ಸಾಲ ಮಂಜೂರಾತಿ, ಆಯುಷ್ಮಾನ್ ಭಾರತ ಕಾರ್ಡ್, ಮುದ್ರಾ, ಸ್ವನಿಧಿ ಯೋಜನೆ, ಕಿಸಾನ್ ಸಮ್ಮಾನ, ವಿಶ್ವಕರ್ಮ ಯೋಜನೆ ಮತ್ತು ಪ್ರಧಾನ ಮಂತ್ರಿಯವರ ಆವಾಸ್ ಯೋಜನೆ ಕುರಿತು ಮಾಹಿತಿ ನೀಡಲಾಯಿತು. ಆರೋಗ್ಯ ಶಿಬಿರದ ಮೂಲಕ ಜನರಿಗೆ ಬಿಪಿ ತಪಾಸಣೆ, ಡಯಾಬಿಟಿಕ್ ಶುಗರ್ ಟೆಸ್ಟ್ ನಡೆಯಿತು. ನೂರಾರು ಸಾರ್ವಜನಿಕರು ಆರೋಗ್ಯ ಶಿಬಿರದ ಲಾಭ ಪಡೆದರು.

ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ ಪ್ರಭುದೇವ, ಇಂಡಿಯನ್ ಬ್ಯಾಂಕ್‌ನ ಮಹಾ ಪ್ರಬಂಧಕ ವಿ. ಗೋವಿಂದರಾಜು, ಬ್ಯಾಂಕ್ ಮ್ಯಾನೇಜರ್ ಅಲೋಕ್ ಕುಮಾರ್ ಮೇಹರಾ ಸೇರಿದಂತೆ ಯೋಜನೆಗಳ ಲಾಭ ಪಡೆದುಕೊಂಡ ಹಲವಾರು ಸಂಖ್ಯೆಯ ಫಲಾನುಭವಿಗಳು, ಇನ್ನುಳಿದ ಜನಪ್ರನಿಧಿಗಳು, ಸ್ಥಳೀಯ ಮುಖಂಡರು, ಬ್ಯಾಂಕುಗಳ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು, ಸಾರ್ವಜನಿಕರು ಮುಂತಾದವರು ಉಪಸ್ಥಿತರಿದ್ದರು.

ಇಂಡಿಯನ್ ಬ್ಯಾಂಕ್‌ನಿಂದ ಆಯ್ದ ಫಲಾನುಭವಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಉಜ್ವಲಾ ಯೋಜನೆಯಲ್ಲಿ ಕಿಟ್ ವಿತರಣೆ ಮಾಡಲಾಯಿತು ಹಾಗೂ ವಿವಿಧ ಇಲಾಖೆಗಳು ಮಳಿಗೆಯನ್ನು ತೆರೆದು ಅಧಿಕಾರಿಗಳು ಯೋಜನೆಗಳ ಮಾಹಿತಿ ನೀಡಿದರು.



# ಡಿ.ಟಿ.ಪಿ ತರಬೇತಿ ಶಿಬಿರ ಉದ್ಘಾಟನೆ



■ವಿಜಯಸಾಕ್ಷಿ ಸುದ್ದಿ, ಗದಗ

ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ ಹುಲಕೋಟಿ ಗದಗ (ಎಸ್.ಬಿ.ಐ.–ಎ.ಎಸ್.ಎಫ್–ಆರ್‌ಸೆಟಿ) ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಅಗ್ರಿಕಲ್ಚರಲ್ ಸೈನ್ಸ್ ಫೌಂಡೇಶನ್ ಹುಲಕೋಟಿ ಇವರ ಪ್ರಾಯೋಜಕತ್ವದಲ್ಲಿ ಫೆ. 19ರಿಂದ ಏಪ್ರಿಲ್ 3ರವರೆಗೆ ಕಂಪ್ಯೂಟರ್ ಡಿ.ಟಿ.ಪಿ ತರಬೇತಿಯನ್ನು ಹಮ್ಮಿಕೊಂಡಿದ್ದು, ತರಬೇತಿಯ ಉದ್ಘಾಟನೆಯನ್ನು ಜಿ.ಪಂ ಯೋಜನಾಧಿಕಾರಿ ಎಮ್.ವಿ ಚಳಗೇರಿ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಆರ್‌ಸೆಟಿ ಸಂಸ್ಥೆಯು ಉಚಿತ ಊಟ–ವಸತಿಯೊಂದಿಗೆ ಉತ್ತಮ ತರಬೇತಿಯನ್ನ ನೀಡುತ್ತಿದ್ದು, ಇದರ ಸದುಪಯೋಗ ಪಡೆದು ಸ್ವಾವಲಂಬಿಗಳಾಗಿ ಉದ್ಯೋಗ ಕೈಗೊಳ್ಳಿ. ಡಿ.ಟಿ.ಪಿ ಕ್ಷೇತ್ರದಲ್ಲಿ ಹೆಚ್ಚಿನ ಬೇಡಿಕೆಯಿದ್ದು, ಸ್ವಂತ ಡಿ.ಟಿ.ಪಿ ಸೆಂಟರ್, ಗ್ರಾಮ ಒನ್, ಸಿಎಸ್‌ಸಿ ಸೆಂಟರ್, ಕಂಪ್ಯೂಟರ್ ಸಹಾಯಕ/ಆಪರೇಟರ್ ಆಗಿ ಉದ್ಯೋಗ ಮಾಡಬಹುದಾಗಿದೆ ಎಂದು ತಿಳಿಸಿದರು.

ಸಂಸ್ಥೆಯ ನಿರ್ದೇಶಕ ಪಿ.ಕೆ. ಹೊಸಮನಿ ಮಾತನಾಡಿ, ಸರಕಾರಿ ಮತ್ತು ಅರೆ ಸರಕಾರಿ ಕೆಲಸ ಮಾಡುವುದಕ್ಕಿಂತ ಸ್ವ–ಉದ್ಯೋಗವನ್ನು ಕಲಿತು ಸ್ವಾವಲಂಬಿಗಳಾಗುವುದು ಉತ್ತಮ. ಈ ಡಿ.ಟಿ.ಪಿ ತರಬೇತಿಯೊಂದಿಗೆ ಮಾತನಾಡುವ ಕೌಶಲ್ಯ, ಸಮಸ್ಯೆಗಳ ಪರಿಹರಿಸುವಿಕೆ, ಯೋಜನಾ ವರದಿ ತಯಾರಿಕೆ, ಕ್ಷೇತ್ರ ಭೇಟಿ, ಬ್ಯಾಂಕಿಂಗ್, ಸರಕಾರದ ಯೋಜನೆಗಳು, ಸಬ್ಸಿಡಿ ಮತ್ತು ಸವಲತ್ತುಗಳು ಹೀಗೆ ಹಲವಾರು ವಿಷಯಗಳ ಬಗ್ಗೆ ತರಬೇತಿಯಲ್ಲಿ ಕಲಿಸಲಾಗುವುದು. ನಾವು ಇನ್ನೊಬ್ಬರ ಮೇಲೆ ಅವಲಂಬಿತರಾಗುವುದಕ್ಕಿಂತ ಸ್ವಾವಲಂಬಿ ಜೀವನ ನಡೆಸುವುದು ಒಳ್ಳೆಯದು ಎಂದರು.

ನವೀನ ಹಿರೇಗೌಡರ ಕಾರ್ಯಕ್ರಮದ ನಿರೂಪಿಸಿದರು. ಚಂದ್ರು ಯಲಿಗಾರ, ಡಿ.ಪಿ.ಎಮ್ ಗದಗ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಧರ್ಮದಿಂದ ವಿಮುಖರಾದರೆ ಬಾಳಲು ಸಾಧ್ಯವಿಲ್ಲ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ದೇವಸ್ಥಾನಗಳು ಮನುಷ್ಯರಲ್ಲಿ ಧರ್ಮ, ಸಂಸ್ಕೃತಿ, ಸತ್ಯ, ನ್ಯಾಯ–ನೀತಿ, ಮಾನವೀಯ ಮೌಲ್ಯಗಳನ್ನು ಬಿತ್ತುವ ಮೂಲಕ ಸಾತ್ವಿಕ ಸಮಾಜ ನಿರ್ಮಾಣ ಶಕ್ತಿ ಕೇಂದ್ರಗಳಾಗಿವೆ ಎಂದು ಮುಕ್ತಿಮಂದಿರ ಧರ್ಮಕ್ಷೇತ್ರದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ಹೇಳಿದರು.



ಅವರು ಗುರುವಾರ ಪಟ್ಟಣದ ಮುಕ್ತಿಮಂದಿರ ರಸ್ತೆಗೆ ಹೊಂದಿಕೊಂಡಿರುವ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ ಹತ್ತಿರ ನಿರ್ಮಾಣಗೊಂಡ ಶ್ರೀ ಶನೇಶ್ವರ, ಗಣಪತಿ, ಆಂಜನೇಯ, ನಾಗದೇವತೆಗಳ ದೇವಸ್ಥಾನ ಉದ್ಘಾಟನೆ ನೆರವೇರಿಸಿ ಆಶೀರ್ವಚನ ನೀಡಿ, ನಾಡಿನ ದೇವಾಲಯಗಳು ಶಾಂತಿ–ಸಾಮರಸ್ಯ ಬೆಳೆಸುವ ಪವಿತ್ರ ಕೇಂದ್ರಗಳಾಗಿವೆ. ಮನುಷ್ಯರಿಗೆ ದೇವಾಲಯಗಳ ಮೇಲಿರುವ ನಂಬಿಕೆ, ದೇವರಲ್ಲಿಟ್ಟಿರುವ ಶ್ರದ್ಧೆ ಅಪಾರ. ಹರಿಯುವ ನೀರಿಗೆ, ದೇಹಕ್ಕಿಂತ ದೇವಾಲಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟವರು ಭಾರತೀಯರು.

ದೇವರು ಎಲ್ಲೆಡೆ ತುಂಬಿದ್ದರೂ ನಾವು ಗುರುತಿಸಲು ಅಸಮರ್ಥರಾಗುತ್ತಿದ್ದೇವೆ. ಬೀಸುವ ಗಾಳಿಗೆ, ಭೂಮಿ ತಾಯಿಗೆ ಒಂದು ಧರ್ಮವಿದೆ. ಧರ್ಮದಿಂದ ವಿಮುಖರಾದರೆ ಬದುಕಿ ಬಾಳಲು ಸಾಧ್ಯವಾಗುವುದಿಲ್ಲ ಎಂದರು.

ಪ್ರಾತಃಕಾಲ ಶನೇಶ್ವರ, ಗಣಪತಿ, ಆಂಜನೇಯ ಮತ್ತು ನಾಗದೇವತೆ ಮೂರ್ತಿಗಳಿಗೆ ಬ್ರಾಹ್ಮೀ ಮುಹೂರ್ತದಲ್ಲಿ ರುದ್ರಾಭಿಷೇಕ, ಪ್ರಾಣ ಪ್ರತಿಷ್ಠಾಪನೆ, ಹೋಮ, ಹವನ ಸಾಂಪ್ರದಾಯಿಕ ಪೂಜಾ ಕಾರ್ಯಕ್ರಮಗಳು ನೆರವೇರಿದವು. ಹೂವಿನಶಿಗ್ಲಿ ವಿರಕ್ತಮಠದ ಶ್ರೀ ಚನ್ನವೀರ ಮಹಾಸ್ವಾಮಿಗಳು ಮತ್ತು ಗುಲಬರ್ಗಾದ ಅಭಿನವ ಕಾರ್ತಿಕೇಶ್ವರ ಶಿವಾಚಾರ್ಯರು ಕಳಸಾರೋಹಣ ನೆರವೇರಿಸಿದರು.

ಗಂಜಿಗಟ್ಟಿಯ ಡಾ.ವೈಜನಾಥ ಶಿವಲಿಂಗೇಶ್ವರ ಶಿವಾಚಾರ್ಯರು, ಕರೇವಾಡಿಮಠದ ಶ್ರೀ ಮಳೆ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು ಆಗಮಿಸಿದ್ದರು. ಈ ವೇಳೆ ಪುರಸಭೆ ಸದಸ್ಯ ಪ್ರವೀಣ ಬಾಳಿಕಾಯಿ, ಮಂಜುನಾಥ ಮಾಗಡಿ, ಎನ್.ವಿ. ಹೇಮಗಿರಿಮಠ, ಸಿ.ಆರ್. ಲಕ್ಕುಂಡಿಮಠ, ಎಂ.ಕೆ. ಕಳ್ಳಿಮಠ, ನಾಗಪ್ಪ ಚಿಂಚಲಿ, ಎಸ್.ಪಿ. ಸಭಾವಡೆಯರಮಠ, ವಿರೇಶ ಮಾಮಾನಿ, ಪಂಪನಗೌಡ ಪಾಟೀಲ, ಶಂಕರ ಬ್ಯಾಡಗಿ, ಶನೇಶ್ವರ ದೇವಸ್ಥಾನದ ಅರ್ಚಕ ಶರಣಯ್ಯ ಹಿರೇಮಠ, ಈರಯ್ಯ ಹಿರೇಮಠ ಸೇರಿ ಹಲವರಿದ್ದರು. ರೇಖಾ ವಡಕಣ್ಣವರ ನಿರೂಪಿಸಿದರು.

# ಕಲ್ಲಾಪೂರ ಗ್ರಾಮದಲ್ಲಿ ಸಾಂಸ್ಕೃತಿಕ ಸೌರಭ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕರ್ನಾಟಕ ಸಂಭ್ರಮ–50ರ ಅಂಗವಾಗಿ ಸಾಂಸ್ಕೃತಿಕ ಸೌರಭ ಕಾರ್ಯಕ್ರಮವನ್ನು ನರಗುಂದ ತಾಲೂಕಿನ ಕಲ್ಲಾಪೂರ ಗ್ರಾಮದ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಇತ್ತೀಚೆಗೆ ಜರುಗಿತು.

ಸಾಂಸ್ಕೃತಿಕ ಸೌರಭ ಕಾರ್ಯಕ್ರಮದಲ್ಲಿ ಕುಮಾರವ್ಯಾಸ ಪ್ರಶಸ್ತಿ ಪುರಸ್ಕೃತ ಸಿದ್ದೇಶ್ವರ ಶಾಸ್ತ್ರೀಗಳು ತೆಲ್ಲೂರ ಅವರು ಕಥಾಕೀರ್ತನ ಪ್ರಸ್ತುತಪಡಿಸಿದರು. ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಭೈರನಹಟ್ಟಿ ದೊರೆಸ್ವಾಮಿ ವಿರಕ್ತಮಠ ಹಾಗೂ ಶಿರೋಳ ತೋಂಟದಾರ್ಯ ಮಠದ ಪೂಜ್ಯ ಶಾಂತಲಿಂಗ ಮಹಾಸ್ವಾಮಿಗಳು ತೆಲ್ಲೂರ ಅವರನ್ನು ಸನ್ಮಾನಿಸಿ ಗೌರವಿಸಿದರು.

ವಿವಿಧ ಸಂಘಟನೆಗಳಿಂದ ಹಾಗೂ ಕಲಾವಿದರಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಮನ ಸೆಳೆದವು. ಸಮಾರಂಭದಲ್ಲಿ ಗದಗ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ, ಶಿರೋಳ ಗ್ರಾ.ಪಂ ಅಧ್ಯಕ್ಷೆ ಹನಮವ್ವ ಹಿರೇಮನಿ, ಉಪಾಧ್ಯಕ್ಷ ಹನಮಂತಗೌಡ ತಿರಕನಗೌಡ್ರ ಸೇರಿದಂತೆ ಸ್ಥಳೀಯ ಚುನಾಯಿತ ಪ್ರತಿನಿಧಿಗಳು, ಗಣ್ಯರು ಪಾಲ್ಗೊಂಡಿದ್ದರು.



■ವಿಜಯಸಾಕ್ಷಿ ಸುದ್ದಿ, ಗದಗ

ಮದ್ಯ ಹಾಗೂ ಬಿಯರ್ ಮೇಲಿನ ಹೆಚ್ಚಿನ ತೆರಿಗೆ ಸೇರಿದಂತೆ ಇನ್ನೂ ಅನೇಕ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಫೆಡರೇಶನ್ ಆಫ್ ವೈನ್ ಮರ್ಚಂಟ್ ಅಸೋಸಿಯೇಷನ್ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಗದಗ ಜಿಲ್ಲಾ ಮಧ್ಯ ಮಾರಾಟಗಾರರು ಪಾಲ್ಗೊಂಡಿದ್ದರು.

ಗದಗ ಜಿಲ್ಲಾ ಮದ್ಯ ಮಾರಾಟಗಾರರ ಸಂಘದ ಅಧ್ಯಕ್ಷ ವಿಠ್ಠಲ ಖಟವಟೆ, ಸುದರ್ಶನ ಹಾನಗಲ್, ವಿಕಾಸ್ ಚೌಹಾಣ್, ಅಶೋಕ್ ಬೇವಿನಕಟ್ಟಿ, ಅರ್ಜುನ್ ಕಲಾಲ್, ಭರತ್ ಕಲಾಲ್, ಭೀಮರಾಜ್ ಕಲಾಲ್, ಯಮನಪ್ಪ ಈಳಿಗೇರ, ವಿನಾಯಕ ಕಬಾಡಿ, ವೆಂಕಟೇಶ್ ಖಟವಟೆ, ದೀಪಕ್ ಬೊಮ್ಮನಹಳ್ಳಿ, ಪಾಂಡು ಕಬಾಡಿ, ರಾಜೇಶ್ ಹುಯಿಲಗೋಳ, ಪ್ರವೀಣ್ ಬೇವಿನಕಟ್ಟಿ, ಜಗದೀಶ ಪವಾರ, ಗೋವಿಂದ ಚವ್ಹಾಣ ಹಾಗೂ ನಾರಾಯಣಸಾ ಪವಾರ ಸೇರಿದಂತೆ ತಾಲೂಕಿನ ಸನ್ನದಾರರು ಉಪಸ್ಥಿತರಿದ್ದರು.

# ಕಾಲಹರಣ ಮಾಡದೇ ಓದಿಗೆ ಮಹತ್ವ ನೀಡಿ

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿಯ ಸಮಿಪದ ತಿಮ್ಮಾಪೂರ ಗ್ರಾಮದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯ ಪ್ರೌಢಶಾಲಾ ವಿಭಾಗದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ವಾರ್ಷಿಕೋತ್ಸವ, ಸಂಸ್ಕೃತಿ–ಜನಪದ ಕಾರ್ಯಕ್ರಮ ಸಂಭ್ರಮದಿಂದ ಜರುಗಿತು.

ಕನಕದಾಸ ಶಿಕ್ಷಣ ಸಮಿತಿಯ ಕಾರ್ಯದರ್ಶಿ ರವೀಂದ್ರನಾಥ ಬಿ.ದಂಡಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ವಿನಾಕಾರಣ ಸಮಯವನ್ನು ಕಾಲಹರಣ ಮಾಡದೇ ಓದಿಗೆ ಸಮಯ ಮೀಸಲಿರಿಸಬೇಕು ಎಂದರು.



ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ನಿವೃತ್ತ ಶಿಕ್ಷಕ ವ್ಹಿ.ಆರ್. ಹುಯಿಲಗೋಳ ಮಾತನಾಡಿ, ವಿದ್ಯಾರ್ಥಿಗಳು ನಾಳಿನ ನಾಡಿನ ಪ್ರಜ್ಞಾವಂತ ಪ್ರಜೆಗಳು. ವಿದ್ಯಾರ್ಥಿ ಜೀವನದಲ್ಲಿ ಓದಿಗೆ ಪ್ರಾಮುಖ್ಯತೆ ನೀಡಿ ವಿದ್ಯಾವಂತರಾಗಿ ಸಮಾಜ ನಿಮ್ಮನ್ನು ಗುರುತಿಸುವಂತಾಗಬೇಕು ಎಂದರು.

ರೈತ ಸಂಘದ ಗದಗ ಜಿಲ್ಲಾಧ್ಯಕ್ಷ ಯಲ್ಲಪ್ಪ ಎಚ್.ಬಾಬರಿ ಕ್ರೀಡಾಕೂಟದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು.

ಮುಖ್ಯ ಅತಿಥಿಗಳಾಗಿ ಪ್ರಾಚಾರ್ಯ ಸಿದ್ದು ಬಿ.ಯಾಪಲಪರವಿ, ಸುರೇಶ್ ಕಮ್ಮಾರ, ಸಿ.ಕೆ. ಹೊಸಹಳ್ಳಿ, ಮಲ್ಲಪ್ಪ ಇದ್ಲಿ, ಹನುಮವ್ವ ತಳವಾರ, ಅಕ್ಕಮ್ಮ ಹಿರೆಬಸಣ್ಣವರ, ಬಾಳಪ್ಪ ಗಂಗರಾತ್ರಿ, ಶರಣಪ್ಪ ಜೋಗಿನ, ಅಲ್ಲಿ ಸಾಬ್ ನದಾಫ ಪಾಲ್ಗೊಂಡಿದ್ದರು.

ಸುನೀತಾ ಕೊಪ್ಪದ ಹಾಗೂ ಸಂಗಡಿಗರು ಪ್ರಾರ್ಥನಾ ಗೀತೆ ಹಾಡಿದರು. ಮುಖ್ಯೋಪಾಧ್ಯಾಯ ರಾಮಣ್ಣ ಪಿ.ಕುರಡಗಿ ಸ್ವಾಗತಿಸಿದರು. ಜಿ.ಬಿ. ಆಡಕಾಯು ಪ್ರಾಸ್ತಾವಿಕ ನುಡಿಗಳನ್ನಾಡಿದರೆ, ರಾಜು ಬಿ.ಚವ್ಹಾಣ ಪ್ರಶಸ್ತಿ ವಿತರಣಾ ಕಾರ್ಯಕ್ರಮ ನಡೆಸಿಕೊಟ್ಟರು. ಎಸ್.ಎಚ್. ಮಲ್ಲಾಪೂರ ನಿರೂಪಿಸಿದರು. ಕೆ.ಎಸ್. ತಳವಾರ ವಂದಿಸಿದರು.

### ಶ್ರೀ ನೀಲಕಂಠ ಮಠದಲ್ಲಿ 26ನೇ ವರ್ಧಂತಿ ರಜತ ಮಹೋತ್ಸವ

# ಸಮಾಜದ ಅಭಿವೃದ್ಧಿಗೆ ಕೈಜೋಡಿಸಿ

■ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ಸಮಾಜದ ಎಲ್ಲ ಸಂಘ–ಸಂಸ್ಥೆಗಳು, ಸಮಾಜದ ಹಿರಿಯರು ಹಾಗೂ ಯುವಕರು ಕೂಡಿ ಶ್ರೀಮಠದ ಹಾಗೂ ಸಮಸ್ತ ಸಮಾಜದ ಏಳ್ಗೆಗಾಗಿ ತನು–ಮನ–ಧನದಿಂದ ಶ್ರಮಿಸುತ್ತಿರುವ ತಮ್ಮೆಲ್ಲರಿಗೂ ಪರಮಾತ್ಮ ಯಶಸ್ಸನ್ನು ಕರುಣಿಸಲಿ. ನಮ್ಮ ಸಮಾಜದ ವ್ಯಕ್ತಿಗಳು ಚಿತ್ರರಂಗದಲ್ಲಿ, ರಾಜಕೀಯ ರಂಗದಲ್ಲಿ ಹಾಗೂ ಇನ್ನಿತರ ಕ್ಷೇತ್ರದಲ್ಲಿ ಪ್ರಜ್ವಲಿಸಬೇಕು. ಸಮಾಜದ ಉನ್ನತಿಗೆ ನಾವು ಸದಾ ನಿಮ್ಮೊಂದಿಗೆ ಇರುತ್ತೇವೆ ಎಂದು ಶ್ರೀ ನೀಲಕಂಠ ಪಟ್ಟದಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ಅಖಿಲ ಭಾರತ ಕುರುಹಿನಶೆಟ್ಟಿ ಸಮಾಜದ ಮೂಲ ಪೀಠವಾದ ಕುರಹಟ್ಟಿ ಪೇಟೆಯಲ್ಲಿರುವ ಶ್ರೀ ನೀಲಕಂಠ ಮಠದಲ್ಲಿ ಕುರುಹಿನಶೆಟ್ಟಿ ಸಮಾಜದ ಮೂಲ ಪೀಠಾಧೀಶ್ವರರ 26ನೇ ವರ್ಧಂತಿ ಮಹೋತ್ಸವದ ವೇದಿಕೆ ಕಾರ್ಯಕ್ರಮದಲ್ಲಿ ಶ್ರೀಗಳು ಮಾತನಾಡಿದರು.



ಹೂವಿನಹಡಗಲಿಯ ರಮೇಶ ಜಂಬಣ್ಣ ಗಣಪಾ ಮಾತನಾಡಿ, ಸಮಾಜದ ಒಳಿತಿಗಾಗಿ ಹಾಗೂ ಅಭಿವೃದ್ಧಿಯೊಂದಿಗೆ ಸಮಾಜವನ್ನು ಉನ್ನತ ಸ್ಥಾನಕ್ಕೆ ತರುವ ಕೆಲಸವನ್ನು ಎಲ್ಲರೂ ಕೂಡಿ ಮಾಡಬೇಕಿದೆಯೆಂದರು.

ಗದಗ–ಬೆಟಗೇರಿ ಕುರುಹಿನಶೆಟ್ಟಿ ಸಮಾಜದ ವರಿಷ್ಠ ಮಂಡಳಿ ಅಧ್ಯಕ್ಷ ಮಲ್ಲಿಕಾರ್ಜುನ ಐಲಿ ಮಾತನಾಡಿ, ಶ್ರೀಮಠದ ಜೀರ್ಣೋದ್ಧಾರ, ಕಲ್ಯಾಣ ಮಂಟಪ, ಹಾಗೂ ಶ್ರೀ ನೀಲಕಂಠೇಶ್ವರ ಮಠದ ಕಾಮಗಾರಿಯು ಮುಕ್ಕಾಲು ಭಾಗ ಮುಗಿದಿದೆ. ಲೋಕಾರ್ಪಣೆ ಮಾಡಲು ಇನ್ನೂ ಸ್ವಲ್ಪ ಆರ್ಥಿಕ ಅವಶ್ಯಕತೆಯಿದ್ದು ತಾವೆಲ್ಲರೂ ಸಹಕರಿಸಿ ಕಾಮಗಾರಿ ಪೂರ್ಣಗೊಳ್ಳಲು ನೆರವಾಗಬೇಕೆಂದರು.

ಕುರುಹಿನಶೆಟ್ಟಿ ಸಮಾಜದ ಹಿರಿಯರಾದ ಕೀರ್ತೆಪ್ಪ ಪಂಪಣ್ಣ ಗೋಟೂರ, ಶ್ರೀ ಗೌರಿಶಂಕರ ಮಹಿಳಾ ವಿವಿದೋದ್ದೇಶಗಳ ಸಂಘದ ಅಧ್ಯಕ್ಷೆ ಶಶಿಕಲಾ ನೀಲಕಂಠಪ್ಪ ಶ್ಯಾವಿ ಸಾಮದರ್ಭಿಕವಾಗಿ ಮಾತನಾಡಿದರು.

ವರ್ಧಂತಿ ಉತ್ಸವ ಸಮಿತಿ ಅಧ್ಯಕ್ಷ ವಾಸು ತಿಮ್ಮಪ್ಪ ಜೋಗಿ ಸ್ವಾಗತಿಸಿದರು. ಸ್ನೇಹಾ ಗೋಟೂರ ಪ್ರಾರ್ಥಿಸಿದರು. ರಾಜು ಲಕ್ಷ್ಮಣಪ್ಪ ಧೂಳಾ ಕಾರ್ಯಕ್ರಮ ನಿರೂಪಿಸಿದರು. ಬಿಚ್ಚಾಲ ಅಂಬಾದಾಸ, ದೇವರಕೊಂಡ ಪುಂಡಲೀಕ ನೀಲಕಂಠ, ಗುರುಮೂರ್ತಿ ಮಲ್ಲೇಶಪ್ಪ ಗಟ್ಟಿ, ಹನಮಂತಯ್ಯ ಆಂಜನಪ್ಪ, ತಿಮ್ಮಣ್ಣ ಶ್ಯಾವಿ, ನಾಗಪ್ಪ ತಟ್ಟಿ, ನಿಂಗಪ್ಪ ಬಸಪ್ಪ ಚೇಗೂರ, ದೇವೆಂದ್ರಪ್ಪ ಗೋಟೂರ, ವಾಸು ತಿಪ್ಪಣ್ಣ ಜೋಗಿ, ಲಕ್ಷ್ಮೀ ಶಂಕರ ಕಾಕಿ, ಶಶಿಕಲಾ ನೀಲಕಂಠಪ್ಪ ಶ್ಯಾವಿ, ರಘುನಾಥ ತುಕ್ಕಾ, ನಿಂಗಪ್ಪ ಚೇಗೂರ, ಪ್ರಭು ರೊಡ್ಡಾನವರ, ಶಶಿಕಲಾ ನಿ.ಶ್ಯಾವಿ, ಚನ್ನಬಸಪ್ಪ ಹಿಂಡಿ ಸೇರಿದಂತೆ ಕುರುಹಿನಶೆಟ್ಟಿ ಸಮಾಜದ ಮುಖಂಡರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka